ಅಪರಂಜಿ

ಮಾರ್ಚ್ 2004

ತಿಳಿನಗೆಯ ಕಾರಂಜಿ



ಪ್ರಕಾಶ್

ಎಚ್.ಕೆ. ರಾಮಚಂದ್ರಮೂರ್ತಿ

ಶ್ರೀನಿವಾಸ ವೈದ್ಯ

ವೈ. ನಾರಾಯಣ ಶರ್ಮ

ನೀರಗುಂದ ಕೇಶವಮೂರ್ತಿ ರಾವ್

ಓಂ ಪ್ರಕಾಶ್

ಎಚ್. ಗೋಪಾಲಕೃಷ್ಣ

ಶಿವು

ಕೃಷ್ಣ ಸುಬ್ಬರಾವ್

ಬಿಡಿ ಪ್ರತಿ: ರೂ. 10.00



ಗೌರವ ಸಲಹೆಗಾರರು:	ಚಂದಾ ವಿವರ:
ಶ್ರೀ ಅ.ರಾ.ಸೇ.	ಬಿಡಿ ಪ್ರತಿ: ರೂ. 10.00
ಶ್ರೀ ಶೇಷಗಿರಿ	ವಾರ್ಷಿಕ ಚಂದಾ ರೂ. 100
ಸಂಪಾದಕ:	ಹತ್ತು ವರ್ಷದ ಚಂದಾ ರೂ. 750
ಶಿವಕುಮಾರ್	Ph: 23345259
ಉಪ ಸಂಪಾದಕ:	email: aparanji@hotmail.com
ಬೇಲೂರು ರಾಮಮೂರ್ತಿ	website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 21 ಮಾರ್ಚ್ - 2004 ಸಂಚಿಕೆ - 6

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು - 27



○ ಪ್ರಕಾಶ್

ನೀರು, ಮೇವು ಪೂರೈಕೆಗೆ ಆದ್ಯತೆ
- ಮುಖ್ಯ ಕಾರ್ಯದರ್ಶಿ

'ಮೇವು' ಅಂದರೇ ಭಯ ಆಗುತ್ತೆ!

★★★

'ಕೃಷ್ಣ ಗಾರುಡಿ ತಂತ್ರ'ಗಳಿಗೆ ಸೆಡ್ಡು ಹೊಡೆದು ತೋರಿಸುವೆ
- ಶ್ರೀ ದೇವೇಗೌಡ

ಎಲ್ಲ ದೇವೇಚ್ಛೆ!!

★★★

ಹೊಲಿಗೆ ಕೆಲಸಗಾರರ ಕ್ಷೇಮ ನಿಧಿ ಸ್ಥಾಪನೆಗೆ ಆಗ್ರಹ
- ಸುದ್ದಿ

A Stitch in time .....!!

★★★

ಪೂಜಾರಿ ವಿರುದ್ಧ ಮಾನನಷ್ಟ ಮೊಕದ್ದಮೆ
- ಪತ್ರಿಕೆ

ಅಯ್ಯೋ ದೇವರೇ?!

★★★

ಆಸ್ತಿ ವಿವರ ಸಲ್ಲಿಸಿದ ಸಚಿವ, ಶಾಸಕರ ವೇತನಕ್ಕೆ ತಡೆ

- ಸುದ್ದಿ

'ಓ ನನ್ನ ವೇತನ....' ಅಂತ ನಾಡಗೀತೆ ಹಾಡಬಹುದು ಈಗ!

★★★

ಮೀನು ತಿಂದರೆ ದೀರ್ಘಾಯುಸ್ಸು

- ಸುದ್ದಿ

ಹಾಗಾದರೆ ಮೀನ-ಮೇಷ ನೋಡಲೇಬಾರದು!

★★★

'ವಿಕಾಸ ಸೌಧ' ಉದ್ಘಾಟನೆ ಇಂದು

- ಪತ್ರಿಕೆ

ಅಲ್ಲಿ ನಿಃಸ್ವಾರ್ಥತೆಯ ವಿಕಸನವಾಗಲಿ!

★★★

ಖಾದಿರ್ ಖಾನ್‌ಗೆ ಮುಷರಫ್ ಕ್ಷಮೆ

- ಸುದ್ದಿ

ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ!!

★★★

Ponting Leaves India Panting!!

★★★

ಇದನ್ನೂ ಸೇರಿಸಿದರೆ ಹೇಗೆ?

ಚೆಂಗಲ ಕೆಂಗಲ ಕಡಿದಾಳ್

ನಿಜಲಿಂಗಪ್ಪರ ಸವಿ ಬಾಳ್


ಪಾಟಿಲ ಕಂಠೀ ಗುಂಡೂ

ಜೇಯೆಚ್ ಕೃಷ್ಣರ ದಂಡೂ

ಚರಣ, ಮುರರಜಿ, ವೀಪೀ ಸಿಂಗರ

....

....



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಎಚ್.ಕೆ. ರಾಮಚಂದ್ರಮೂರ್ತಿ

'ಅಪರಂಜಿ' ಓದುಗರಿಗೆ ಚಿರಪರಿಚಿತವಾದ ಹೆಸರು 'ಶೀನು' ಯಾನೆ ಶ್ರೀನಿವಾಸ ವೈದ್ಯ ಅವರ ಈ ಅನನ್ಯ ಸಾಧಾರಣ 'ಕಥಿ'ಯೊಡನೆ ನೀವು ಏಕ್‌ದಮ್ ಉತ್ತರ ಕರ್ನಾಟಕದ ಜಾನಪದ ಪುರಾಣ ಲೋಕವನ್ನು ಪ್ರವೇಶಿಸುತ್ತೀರಿ. ಇಲ್ಲಿ ಆಡುಮಾತಿನ ಕಾವ್ಯಾತ್ಮಕತೆಯನ್ನೂ, ಪ್ರಾದೇಶಿಕ ಸೊಗಡನ್ನೂ ವಿನೋದ ಕಥಾನಕ ಹೆಣೆಯಲು ದುಡಿಸಿಕೊಂಡಿರುವ ಪರಿ ಅನಾದೃಶ್ಯವಾಗಿದೆ. ಕಿತ್ತೂರ ಬಸ್ಟ್ಯಾಂಡು - ಇಳಕಲ್ ಸೀರಿ ಉಟಗೊಂಡ, ರಬಕವಿ ಕಣದ ಕುಬಸು ತೊಟ್ಟಾಗಿ ಹರೇದ ಹೆಣಮಗಳು - ಈ ಶೀನೂ ಪುರಾಣದ ಖತಾ ನಾಯಕಿ ಸಣ್ಣೀರಿ - ಅಕಿ ಒಂದು ಕಡೆ. ಇನ್ನೊಂದು ಮಗ್ಗುಲಾಗೆ ಚೂಪನ್ನ ಮೂಗು, ನಗೂ ಕಣ್ಣಗೋಳ, ದಟ್ಟ ಮೀಶೆ, ಹುರಿ ಕಟ್ಟಿದ ದೇಹ, ಕೆದರಿದ ಕೂದಲ, ಮೆಳ್ಳಗಣ್ಣ ಕಾಮಣ್ಣ ಮಲಕಾಜಿ.... ಉರುಫ್ ಮಲಕಾಜಪ್ಪ. ಇಕಿ ಗಂಡನ್ನ ಕಳಕೊಂಡ ಮಕ್ಕಳು ಮರಿ ಇಲ್ಲದ ಉಡಕೀ ಹೆಂಗಸ - ಹಂಗS ಹೇಣ್ತಿನ ಕಳಕೊಂಡ ಇಮನೀ ಗಂಡ ಅವ. ಇವರಿಬ್ಬರ ನಡುವೆ ಸುರುವಾಗುವ ಒಗರು ವಿನೋದದ ಗ್ರಾಮೀಣ ರೊಮಾನ್ಸು - ಹಂತ ಹಂತವಾಗಿ ರೂಪಗೊಳ್ಳುವ ಹೃದಯಸ್ಪರ್ಶಿ, ಮಾನವೀಯ ಹೃದಯಾಂತಃಕರಣ ಸಂಬಂಧ, ಕಡೆಯಲ್ಲಿ ಅಕಿ ತನ್ನಣ್ಣನ ಮಗನ ಮದ್ವಿ ಕಾರಿಯಕ್ಕೆಂದು ತಂದಿದ್ದ 'ಬಾಶಿಂಗ' ಯರ್ಥವಾಗಬಾರದೆಂದು ತೀರ್ಮಾನಿಸಿದಾಗ ಇಬ್ಬರೂ ಒಪ್ಪಿ ದ್ಯಾಮಾಪುರದ ಉಡ್ಕೀ ಹೆಂಗಸು ಸಣ್ಣೀರವ್ವನಿಗೂ ಯರಗಟ್ಟಿ ಇಮನೀ ವರ ಮಲ್ಲಿಕಾರ್ಜುನಪ್ಪನಿಗೂ ಬೈಲಹೊಂಗಲದ ಸ್ವಾಮಿಗೋಳ ಆಶೀರ್ವಾದ ಮಾಡಿ ಕೊಟ್ಟಂಥಾ ಬಾಶಿಂಗ ಕಟ್ಟಿ ಲಗ್ಗಣ ಹೊಡೆಸುವ ಸೂಕ್ಷ್ಮ ವ್ಯಂಗ್ಯದ ಈ ಕಥೆ ನನಗೊಂದು ಅನನ್ಯ ರಸಾನುಭವ ಕೊಟ್ಟಿದೆ. ಹಾಸ್ಯ ಸಾಹಿತ್ಯದ ಬಗ್ಗೆ ಎಲ್ಲೋ ಓದಿದ ಈ ಮಾತು ನೆನಪಾಗುತ್ತಿದೆ - ಅದು ಇಲ್ಲಿ ಎಷ್ಟು ಸೊಗಸಾಗಿ ಅನ್ವಯಿಸಬಹುದೆಂದು ನೀವೇ ನೋಡಿ: "There is a "green world' of joy and physical vitality essential to most humour.... and it deals with the earthy and the appetitive - especially money and sex, with man and man and with common sense, for or against society but always in it.....'

(ಶ್ರೀನಿವಾಸ ವೈದ್ಯರ 'ಮನಸುಖರಾಯನ ಮನಸು'ದಿಂದ)

★★★

ಬಾಶಿಂಗ ಬಲ

- ಶ್ರೀನಿವಾಸ ವೈದ್ಯ

ಉಗಾದಿ ಕಳದ ಹತ್ತ ಹನ್ನೆರಡು ದಿವ್ಸ ಆಗಿರಬೌದು. ಅವತ್ತ ಮುಂಜಾಲಿಸುಟ್ಟೊ ಕಿತ್ತೂರ ಬಷ್ಟ್ಯಾಂಡದಾಗ ಯಿಪರೀತ ಗದ್ದಲ ಗೌಜಿ. ಹಂತರದರಾಗನ ಒಬ್ಬಾಕಿ ಹರೇದ ಹೆಣಮಗಳು ಹೊಸಾ ಇಳಕಲ್ ಸೀರಿ ಉಟಗೊಂಡ, ಕಬಕವಿ ಕಣದ ಕುಬಸಾ ತೊಟ್ಟಾಕಿ, ಹೋಗೊ ಬರೋ ಕಂಡಕಟರಗೋಳು ಡ್ರ್ಯಾಯಿವರಗೋಳೂ ಅಷ್ಟ ಅಲ್ಲದ ಬಸ್ಸಿನಿಂದ ಇಳದ ಬರೋ ಪಾಸಿಂದರಗೋಳನ್ನ ಸಹಿತ ನಡಬರಕಽ ತರಬಿ ತರಬಿ ''ಯಪ್ಪಾ ಯರಗಟ್ಟಿಗೆ ಹೋಕ್ಕೈತೇನ್ರಿ, ಈ ಮೋಟಾರೂಽಽ.'' ''ಬಸ್ಸು ಯವಾಲ್ಲಿಗೆ ಹೋಕ್ಕೈತ್ರಿ'' ಅಂತ ದೈನಾಸ ಬಟಗೊಂತ ಕೇಳಾಕ ಹತ್ತಿದ್ದಳು.

ಹತ್ತೀ ಕಟಾಪು ಮುಗಿದಿತ್ತಂತೋ, ಇಲ್ಲಾ ಯಲ್ಲಮ್ಮನ ಗುಡ್ಡದ ಜಾತ್ರಿ ಬಂದಿತ್ತಂತೋ, ಅತವಾ ಲಗ್ಗಣ ಮಾಸ ಇತ್ತಂತೋ ಏನೋ ಅಂತೂ ಕಿತ್ತೂರ ಬಷ್ಟ್ಯಾಂಡ ತುಂಬ ಜನಾ ಜಾತ್ರಿ ಗಿಜಿಗುಟ್ಟಿ ಹೋಗಿತ್ತು. ಲಗ್ಗಣ ಮಾಸಂತಽ ಇರಬೇಕು. ಹೊಸಾ ಹೊಸಾ ಸೀರಿ ಉಟಗೊಂಡ ನಾರೇರೂ, ಅವರ ಬಗಲಾಗ ಕೊಂಯ್ಯಾ ಕೊಂಯ್ಯಾ ಅಂತ ಅಳೋ ಕೂಸಗೋಳೂ, ಡಬ್ಬಣ ಕಾಟೀ ಧೋತ್ರ, ಉಟಗೊಂಡ, ಶಮನಾ ಬಿಟ್ಟ ಪಟಗಾ ಸುತಿಗೊಂಡ, ಬಾಯಿ ತುಂಬ ತಂಬಾಕು ತುಂಬಿಕೊಂಡು ಪಿಚಕ್ ಪಿಚಕ್ ಅಂತ ಉಗಳಿಕೊಂಡ ಅಡ್ಡ್ಯಾಡೋ ಗಂಡಸೂರು ಷ್ಟ್ಯಾಂಡ ತುಂಬ ಕೀಸರಾ ಬಾಸರಾ ಇಡಿಸಿ ಬಿಟ್ಟಿದ್ದರು.

ಹಾಂಗ ಬಷ್ಟ್ಯಾಂಡ ಅನ್ನಾಕ ಅದೇನ ಹುಬ್ಬಳ್ಳಿ ಇಲ್ಲಾ ಬೆಳಗಾವಿ ಗತೆ ದೊಡ್ಡ ಷ್ಟ್ಯಾಂಡಽಽ? ಡಾಂಬರ ರಸ್ತೇದಿಂದ ಒಂದೋ ಎರಡೋ ಬಸ್ಸುಗೋಳು ಇಕಡೇದಿಂದ ಒಳಗ ಬಂದು ಆಕಡೆ ಮತ್ತ ಹೊರಗ ಹೋಗಿ ಡಾಂಬರ ರಸ್ತೇಕ ಕೂಡೋ ಅಟಽ ಜಾಗಾ. ನಡಬರಕ ಒಂದ್ನಾಕ ಬಸ್ಸು ನಿಲ್ಲೋ ಆಟ ಪೈಸು. ಒಂದು ಕಡೆ ದೊಡ್ಡ ರಸ್ತೇಕ್ಕ ಬೆನ್ನು ಮಾಡಿ ಕಟ್ಟಿದ್ದು ಎಷ್ಟೀ ಆಫೀಸ. ಅದರ ಬಾಜೂಕನ ಪಾಸಿಂದರಗೋಳು ಕುಂದ್ರಾಕ ಒಂದೀಟ ಜಾಗಾ ಮ್ಯಾಗ ತಗಡ ಹೊದಿಸಿದ್ದು. ಅದಕ್ಕೆ ಹತ್ತೇ ಇಕಡೆ ''ಪರಬೂ ವಿಲಾಸ ಎಷ್ಟೀ ಕ್ಯಾಂಟೀನು''. ಪರಬೂ ವಿಲಾಸ ಗಟ್ಟದ ಕಡೀ ಬಟ್ಟರದು. ಹಂಗಾಗಿ ಅದರಾಗ ಬರೇ ಇಡಲಿ, ದ್ವಾಶಿ, ಉಪ್ಪಿಟ್ಟು, ಹಿಂತಾ ಹಾರೂರ ತಿನ್ನೂ ಅಳಬುರಕ ಸಾಮಾನಽಽ. ಚಾ ಸಯಿತ ತೆಳ್ಳಗ ಬಿಸಿನೀರ ಕಷಾಯ. ಅದ ಆಕಡೆ ಅಂದ್ರ ತೇಟ ಪರಬೂವಿಲಾಸದ ಯಿರುದ್ದ ದಿಕ್ಕಿಗೆ ಆಚೆಕಡೀ ದಂಡಿಗೆ ಹತ್ತಿ ''ಸಿದ್ದಲಿಂಗೇಸ್ವರ ಚಾ ಕಾಪಿ ಟೀ ಕ್ಲಬ್ಬ'' ಅಯ್ತಿ. ಸಿದ್ಲಿಂಗೇಸ್ವರದ ಮಾಲಕ ಕಿತ್ತೂರವನ, ಜಂತ್ಲಿ ಓಣಿ ಪರಪ್ಪ. ಹಂಗಾಗಿ ಅಲ್ಲೆ ಚಲೋತ್ನಾಗಿ

ಗೋಕಾಕ ಕರದಂಟಾS, ಮಂಡಕ್ಕಿ ಉಂಡಿS, ಕಾರದಾಣಿ, ಅತ್ತಿಕಾಯಿ ಪುಗ್ಗೆ, ಮಿರ್ಚಿ ಯಲ್ಲಾ ಸಿಗತಾವು. ಮ್ಯಾಗ ಕುದಿಸಿ ಬಟ್ಟ ಇಳಿಸಿದ ಚೊಲೋ ಚಾ ಬೆಲ್ಲದ್ದು. ಹಿಂಗಾಗಿ ಈ ಬಾಗದ ಗೊತ್ತಿದ್ದ ಮಂದೆಲ್ಲ 'ಸಿದ್ದಲಿಂಗೇಸ್ವರಕ್ಕ' ಹೋಕ್ಕಾರು, ಆದರ ಸೈತ ಬಸ್ಸಗೋಳ ಬರಾಣಾ 'ಪರಬೂ ವಿಲಾಸ'ಕ್ಕ ಗದ್ದಲ ಮಕರತೈತಿ. ಅದಕ್ಕೊಂದ ಕಾರಣನೂ ಅಯ್ತಿ. 'ಪರಬೂ ವಿಲಾಸ'ಕ್ಕ ಹೊಂದೇ 'ರಾಜಕುಮಾರ ಪಾನ ಬಂಡಾರ' ಪೆಟಗಿ ಅಂಗಡಿ ಆಯ್ತಿ. ಆದರಾಗ ಪಾನ ಸಿಗರೇಟ ಆಟ ಅಲ್ಲದS ಎಲ್ಲಾ ತರದ ಪೇಪರೂ ಸಿಗ್ತಾವ. ಸಂಯುಕ್ತ ಕರ್ನಾಟಕ, ಸುಧಾ, ಮಯೂರ, ತರಂಗ, ಲಂಕೇಶ್ ಪತ್ರಿಕೆ. ಯಲ್ಲಾ ಅಂದ್ರ ತೇಟಯಲ್ಲಾ.

ಬಷ್ಟ್ಯಾಂಡಮ್ಯಾಗ ಕಾಲೀ ಪಾಸಿಂದರಗೋಳ ಅಷ್ಟS ಅಲ್ಲದS ಉರಾಗಿನ ಕೆಲಸಾ ಬಗಸಿ ಇಲ್ಲದ ಮಂದಿನೂ ಹೊತ್ತ ಕಳ್ಯಾಕಂತS ಬಂದಿರತಾರ.

ಇದೆಲ್ಲಾ ಇದ್ದದ್ದS. ಆದ್ರ ಅವತ್ತ ಮಾತ್ರ ಕಿತ್ತೂರ ಷ್ಟ್ಯಾಂಡ ಮ್ಯಾಗ ಗದ್ದಲದ ಜತೆಗೇನS ಏನೋ ಒಂದು ಮಜೇಶೀರ ಹವಾ ಬಿಟ್ಟಂಗಿತ್ತು. ಒಂದೇನೋ ವಿಶೇಷ ಹಕೀಕತ್ತS ಇದ್ದಂಗಿತ್ತು, ಮಜಕೂರS ಬ್ಯಾರೆ ಇದ್ದಂಗಿತ್ತು.

ಇಕಡೇ 'ಪರಬೂ ವಿಲಾಸ'ದ ಬಾಜೂಕ ಕೊಳ್ಳ ಹರದದ್ದ ಒಂದ ಚಕಡೀ ನೊಗಕ್ಕ ಆತು ನಿಂತಗೊಂಡಂತ ಒಬ್ಬ ಗಂಡುಮಗ, ಹತ್ತ ಸರೇ ಹೋಗೋ ಬರೋರನೆಲ್ಲ ಯಪ್ಪಾ ಯರಗಟ್ಟಿಗೆ ಹೋಕ್ಕೈತೇನ್ರಿ ಈ ಬಸ್ಸು ಆಂತ ಒದ್ರ್ಯಾಡಾಕ ಹತ್ತಿದ್ದಲ್ಲS ಆಕಿನ್ನ ಟಕ ಮಕ ಟಕ ಮಕ ನೋಡಿಕೊಂಡ ನಿಂತಿದ್ದ. ಗಂಡಮಗ್ಗ ಸಾದಾರಣ ಮುವತ್ತು ಮುವತ್ತೈದರ ಹರೇ ಇದ್ದೀತು. ಎತ್ತರ ಮೈಕಟ್ಟು, ಹೊಲದಾಗ ದುಡದು ಹುರಿಕಟ್ಟಿದ ದೇಹ, ಕೆದರಿದ ಕೂದಲ, ಚೂಪನ್ನ ಮೂಗು, ನಗೂ ಕಣ್ಣಗೋಳ, ದಟ್ಟ ಮೀಶೆ, ಯಲೀಅಡ್ಕಿ ಬಾಯಿ, ಒಟ್ಟಿನ ಮ್ಯಾಗ ಶೆಟ್ಟರ ಓಣಿ ಕಾಮಣ್ಣನ ಗತೆ ಇದ್ದ ಮನಿಶಾ. ಬಲಗಡೆ ಬಗಲಾಗ ರುಮಾಲ ಮುದ್ದಿ ಮಾಡಿ ಹಿಡಕೊಂಡು, ಎಡಗೈ ಮುಷ್ಟೀಲೇ ಒಂದು ಬರ್ಕಲಿ ಸಿಗರೇಟ ಸೇದಿಕೊಂತ ನಡನಡಕ ಹಾವಿನ ಗತೆ ನಾಲಿಗೀ ಹೊರಗ ಚಾಚಿ ಸಾಕಷ್ಟು ಕೆಂಪು ಆಗೈತೋ ಇಲ್ಲೋ ಅಂತ ಮೆಳ್ಳಗಣ್ಣ ಮಾಡಿ ನೋಡಿಕೊಂಡS ಸಿಗರೇಟಿನ ಕೈಲೇನ ಮೀಶಿ ತುದಿ ಹಗರಕ ತಿರುಚಿಗೊಂತ, ಒಂದಳತೀ ಕಣ್ಣಾಗನ ನಕ್ಕೋಂತ, ಯರಗಟ್ಟಿ ಹೆಣಮಗಳನ್ನ ಬಿಟ್ಟೂ ಬಿಡದ ನೋಡಿಕೊಂಡ ನಿಂತಿದ್ದ.

ಯರಗಟ್ಟಿ ಹೆಣಮಗಳನ್ನ ನೋಡಾಕ ಹತ್ತಿದ್ದ ಅಂದ್ರ ಅದರಾಗ ಅಂವಂದೇನ ತೆಪ್ಪ ಇದ್ದಿದ್ದಿಲ್ಲ. ಆ ಪೋರಿ ಹಂಗS ತೆಳ್ಳಗ ಎತ್ತರ ಚಂದಾಗಿ ನೋಡತಕ್ಕವರಹಂತ ದೇಖಾವೇನS ಇದ್ದಳು. ಇಡೀ ಕಿತ್ತೂರ ಬಷ್ಟ್ಯಾಂಡಿಗೆ ಬಷ್ಟ್ಯಾಂಡS ಆಕಿನ್ನ ನೋಡಾಕ ಹತ್ತಿತ್ತು. ಇರಲಿ ಅದೆಲ್ಲಾ ನಡಿಯೂದS.

ಅದಽ ಯೂಳೇಕ್ಕಽ ನಮ್ಮ ಖತಾ ನಾಯಕಿ ಯರಗಟ್ಟಿ ಹೆಣಮಗಳು ಆಕಡೇ ಇಕಡೇ ಅಡ್ಡ್ಯಾಡಿ ಅಡ್ಡ್ಯಾಡಿ ಬ್ಯಾಸತ್ತು ಪರಬೂ ವಿಲಾಸದ ಬಾಜೂಕನಽ ಬಂದು, ಕೊಳ್ಳ ಹರದ ಚಕಡೀ ಹಂತೇಕ ಗ್ವಾಡೀ ನೆಳ್ಳಿಗೆ ಕುಕ್ಕರಗಾಲಲೇ ಕುಂತು, ಮೋರಿ ಮ್ಯಾಗಿನ ಬೆವರು ಸೆರಗಲೇ ಒರಸಿಕೊಳ್ಳಾಕ ಹತ್ತಿದ್ಲು, ಬಗಲಾಗಿನ ಬಿದರಿನ ಬುಟ್ಟಿ ಬಾಜೂಕ ಇಟಗೊಂಡು. ಅಂದ್ರ, ನಮ್ಮ ಗಂಡಮಗ ಸಿಗರೇಟ ಸೇದಿಕೊಂತ ನಿಂತಿದ್ದನಲ್ಲ ತೇಟ ಅಲ್ಲೇ ಬಂದ ಕುಂತ್ಲು.

ಗಂಡಮಗ್ಗ ಗಡಿಗ್ಯಾಗಿನ ಗೋದಿಹುಗ್ಗಿ ಗಂಗಾಳದಾಗ ಬಿದ್ದಂಗಾತು. ಸೊರ್ಗ ನಾಕಽ ಬಟ್ಟು ಉಳಧಾಂಗಾತು. ಅಂವ ಕೈಯಾಗಿನ ಸಿಗರೇಟ ಚೆಲ್ಲಿ, ಕಾಲಾಗಿನ ಗಿರಕೀ ಮಟ್ಟೀಲೇ ಅದನ್ನ ಎಡಕಮ್ಮೇ ಬಲಕೊಮ್ಮೇ ತಿರುಚಿ ಹಿಸಕಿ ಹಾಕಿ ಹಗರಕ ಹೆಣಮಗಳ ಹಂತ್ಯಾಕ ಬಂದು ''ಯಾ ಊರಿಗೆ....?'' ಎಂದು ಪೀಟಿಕಾ ಹಾಕಿದ.

''ಯರಗಟ್ಟಿಗಿರಿಽಽ'' ಎಂದಳು ಬಾಲೆ.

''ಹೌಂದೇನ? ಬೇಶಾತಲ್ಲ... ನಾನೂ ಯರಗಟ್ಟಿಯವನ .... ಯರಗಟ್ಟ್ಯಾಗ ಯಾರ ಮನೇವ್ರು.... ಏನಾಂತರು ತಿಳೀಲಿಲ್ಲ'' ಅಂತ ಕೆದಕಾಕ ಹತ್ತಿದ.

''ನಾವು ಖುದ್ದ ಯರಗಟ್ಟ್ಯಾವರಲ್ಲರೀ... ಅದರ ಹಂತ್ಯಾಕ ಹತ್ತ ಮೈಲ ಬಿಟ್ಟು ದ್ಯಾಮಾಪೂರದವ್ರು. ಯರಗಟ್ಟ್ಯಾಗ ನಮ್ಮಣ್ಣನ ಮಗನ ಲಗ್ಗಣ ಕಾರೆ ಇಟಗೊಂಡಾರ. ಅದಕಂತ ಮನ್ನಿ ಬೈಲಹೊಂಗಲಕ ಹೋಗಿ ಬಣಗಾರ ಕಡಿಂದ ಬಾಶಿಂಗ ಮಾಡಿಸಿಕೊಂಡ, ಚಿತ್ತರಿಗಿ ಸ್ವಾಮಿಗೋಳಿಗೆ ಪಾದಕ್ಕೆ ಮುಟ್ಟಿಸಿ.... ಹತಗಡ್ಯಾವರಿಗೆ ನಿರೂಪ ಮುಟ್ಟಿಸಿ, ಮುಂಜಾಲಿ ಕಿತ್ತೂರಿಗೆ ಬಂದ, ಹೂವಽ ಹಾರಾಽ ತಗೊಂಡು ಹೊಂಟೇನಿ.'' ಎಂದು ಬಿದರಿನ ಬುಟ್ಟಿಯಲ್ಲಿದ್ದ ಎರಡು ಬಾಶಿಂಗಗಳನ್ನೂ ಕಾಗದದ ಪಟ್ಟಣದಾಗಿ ಸುತ್ತಿದ ಹೂವಿನ ಹಾರಾನೂ ತೋರಿಸಿದಳು. ''ಯಷ್ಟೋತಿಗೆ ಕಾರೇ ಯರಗಟ್ಟ್ಯಾಗ...?'' ಕೇಳಿದ ಗಂಡುಮಗ.

''ಮುಂಜಾಲೇ ಇತ್ತರೀ... ಹಾಂಗ ನೋಡಿದ್ರೆ ಯಾಳೇ ಆಗೇತಿ'' ಅಂದಳ ಅಕಿ. ಹೊಸ ಶೀರಿಯಾಕಿ.

ಅದನ್ನ ಕೇಳಿ ಅಂವ ಕೇದದಿಂದ.... ''ಚೇ... ಚೇ... ಚೇ.... ಹಂಗಾರ ಬಾಶಿಂಗ ಯರ್ತ ಆದಾಂಗಾತಲ್ಲ'' ಅಂದ.

''ಅದೆಂಗ ಯರ್ತ ಅಕ್ಕೈತ್ರಿ? ಬಾಶಿಂಗನ ಇಲ್ಲದ ಕಾರೇ ಹೆಂಗ ಮಾಡತಾರು, ನಿಮದೊಂದಽಽ'' ಅಂದ್ಲು.

''ಅದೂ ಕರೇವ ಅನ್ನು ಅಂಥಂಗ ಒಬ್ಬಾಕೀನಽ ಪೊಂಟಂಗ ಕಾಣತೈತಲ್ಲ? ಗಂಡ ಮಕ್ಕಳೂ ಹೆಸರೂ - ದೆಶಿ,'' ಅಂತ ಮತ್ತ ಗೆಬರ್‍ಯಾಡಾಕ ಹತ್ತಿದ ಮನಿಶಾ. ''ನನಗ ಸಣ್ಣೀರವ್ವ ಅಂತಾ ಹೆಸರಿಟ್ಟಾರಽ. ನಮ್ಮ ಅವ್ವನ ಹೆಸರು ಈರವ್ವ ಅಂತ ಇತ್ತಂತಽ ನಾ ಹಟ್ಟೂತಲೇ ನಮ್ಮ ಅವ್ವ ಸತ್ತ ಹೋದಲಂತ, ಅದಕ್ಕ ಎಲ್ಲಾರೂ ನನಗ ಸಣ್ಣೀರಿ... ಸಣ್ಣೀರಿ ಅಂತಾರ''ಅಂದು ಮಕಾ ಮ್ಯಾಲ ಮಾಡಿ ಅವನ ಮೋತಿ ನೋಡಾಕ ಹತ್ತಿದಳು.

''ನನಗ? ನನ್ನ ಹೆಸರು ಮಲ್ಲಿಕಾರ್ಜುನಪ್ಪ, ಎಲ್ಲಾರು ಮಲಕಾಜೀ, ಮಲಕಾಜಪ್ಪ ಅಂತಾರು....'' ಅನಕೋತ ಮಲಕಾಜಿ ಇನ್ನೂ ಏನೇನೋ ಹೇಳಾಂವಿದ್ದ. ಅಷ್ಟರಾಗ ಇಚ್ಚೇಕಡಿಂದ ಒಂದ ಬಸ್ಸು ಬಂದದ್ದು ನೋಡಿ ಸಣ್ಣೀರವ್ವ ಬಗಾನಽ ಬಾಶಿಂಗದ ಬುಟ್ಟಿ ಬಗಲಾಗ ಇಟಗೊಂಡ ಓಡೋಡಿ ಬಂದ, ಕಂಡಕಟರನ ತರುಬಿ, ''ಯಪ್ಪ ಯರಗಟ್ಟಿಗೆ ಹೋಕ್ಕೃತೇನ್ರಿ ಇದು?'' ಎಂದು ಕೇಳಿದಳು. ಹಿಂತಾ ಪ್ರಶ್ನೆಗೋಳಿಗೆ ಉತ್ತರಾ ಹೇಳಿ ಹೇಳಿ ಬ್ಯಾಸತ್ತ ಕಂಡಕಟರ ಕ್ವಾಪದಿಂದ ''ನಿನಗೇನು ತೆಲಿಗಿಲಿ ಆಯಿತೋ ಇಲ್ಲೊ? ಬಸ್ಸಿನ ಮೋತಿ ಎಲ್ಲೈತಿ... ಇನ್ನೊಂದೆಲ್ಲೈತಿ ಅದನ್ನರ ನೋಡಲ್ಲ ಒಂದೀಟ... ಹುಬ್ಬಳ್ಳಿಯಿಂದ ದಣೇ ಅಂತ ಬೆಳಗಾವಿಗೆ ಹೊಂಟೈತಿ, ಹಂತಾದರಾಗ ಯರಗಟ್ಟಿ ತರತಾಳ... ಯರಗಟ್ಟಿ'' ಅಂತ ಬೈಕೊಂತ ಅನಕೊಂತ 'ಪರಬೂಯಿಲಾಸ'ಕ್ಕ ಹೊಂಟ ಬಿಟ್ಟೇ ಚಾ ಕುಡಿಯಾಕ.

ಪಾಪ! ಸಣ್ಣೀರಿ ಮತ್ತ ಮೋತಿ ಸಣ್ಣದು ಮಾಡಿಕೊಂಡು ಮಲಕಾಜಪ್ಪ ಕುಂತಲ್ಲೆ ಬಂದಳು. ಮಲಕಾಜಿ ಆಕಿನ್ನ ಸಮಾಧಾನ ಮಾಡಿಕೊಂತ ''ಯಾಕ ಒದ್ದ್ಯಾಡತೀ ಬಾ. ಬಂದಾಗ ಬರ್ಲಿ, ಸರಕಾರೀ ಬಸ್ಸುಗೋಳ ಅವು, ಅವಕ್ಕೇನ ಹೊತ್ತಽಽ ಗೊತ್ತಽಽ'' ಅಂದ, ಥ್ವಾಡೇ ಹೊತ್ತ ಬಿಟ್ಟ ''ಚಾ ಕುಡದ ಬರೋಣ ಬಾ'' ಅಂದ, ಹೆದರಿಕೊಂತ. ಸಣ್ಣೀರಿ ಮದಲ ಒಂದೀಟ ಮುರಕಾ ಮಾಡಿದರೂ ಆಮ್ಯಾಲೆ ಅವನ ಹಿಂಬಾಲೆ ಹೋದಳು. ಇಬ್ಬರೂ ಸಿದ್ದಲಿಂಗೇಸ್ವರಕ್ಕ ಹೋಗಿ ಚಾ ಕುಡದ ಮತ್ತು ಹೊಳ್ಳಿ ಬಂದ ಗ್ವಾಡಿ ನೆಳ್ಳಿಗೇ ಕುಂತರು.

''ಇನ್ನ ಯಲೇಡಕಿಽಽ....'' ಅನಕೊಂತ ಮಲಕಾಜಿ ತನ್ನ ಕಿಶೇದಾಗ ಹುಡಕ್ಯಾಡಾಕ ಹತ್ತಿದ. ಅದನ್ನ ನೋಡಿ ಸಣ್ಣೀರಿ ''ನನ್ನ ಹಂತ್ಯಾಕ ಅದಾವು'' ಅನಕೋಂತ ಎಡಗೈಲೇ ಸೀರಿ ಸೆರಗ ನೆಟ್ಟಗ ಮಾಡಿಕೊಂತ, ಮೋತಿ ಆಚಿ ಕಡಿ ಹೊಳ್ಳಿಸಿ ಒಂದೀಟಽ ಮೈ ಮಗ್ಗಲಾ ಮಾಡಿ ಮಲಕಟ್ಟಿನ್ಯಾಗಿಂದ ಚಂಚಿ ತಗದ ಮಲಕಾಜಿಗೆ ಯಲೇಡಕಿ ಕೊಟ್ಟ ತಾ ಅಡ ತೊಗೊಂಡು, ಮತ್ತ ಚಂಚಿ ಒಳಗ ಹಣಕಿ ಹಾಕಿ ''ಅಯ್ ನನ ಶಿವನ.'' ಅಂದಳು ''ಯಾಕ ಏನಾತು?'' ಅಂತ ಮಲಕಾಜಿ ಕೇಳಾಣಾ, ''ಸುಣ್ಣದ ಕಾಯೀನಽ ಇಲ್ಲ'' ಅನಕೊಂತ ನಗಾಕ ಹತ್ತಿದಳು. ಆವಾಗ ಮಲಕಾಜಿ ''ನನ್ನ ಹಂತ್ಯಾಕ ಅಯ್ತಿ'' ಅಂದ ರುಮಾಲ ಬಿಚ್ಚಿ ಅದರ ಒಂದು ಸೈಡಿನ್ಯಾಗ ಗಂಟ ಕಟ್ಟಿದ ಸುಣ್ಣದ ಡಬ್ಬಿ ಬಿಚ್ಚಿ, ಬಲಗೈಯಾಗ ಡಬ್ಬಿ ಹಿಡಿದು ಎಡಗೈ ಹೆಬ್ಬಟ್ಟಿಲೇ ತನಗೇಟ ಬೇಕೋ ಆಟ ಗೆಬರಿಕೊಂಡ ಉಳದದ್ದನ್ನು ಗೀರಿ ಗೀರಿ ತಗದು ಎಡಗೈ ಹೆಬ್ಬಟ್ಟ ಸಣ್ಣೀರಿ ಮುಂದ ಸೆಟಸಿ ಹಿಡಿದ, ತಿತಿ ಮಾಡೂ ಹಾರೂರು ನೀರು ಬಿಡೋ ಮುಂದ ಹೆಬ್ಬಟ್ಟ ಸೆಟಸಿರತಾರಲ್ಲ ತೇಟ ಹಂಗಽ.

ಸಣ್ಣೀರಿ ತನ್ನ ಬಲಗೈ ಅಂಗಟೀಬಳ್ಳ ಹಗರಕ ಮುಂದ ಚಾಚಿ ಮಲಕಾಜೀ ಹೆಬ್ಬಟ್ಟಿನಿಂದ ಸುಣ್ಣ ಗೀರಿ ತೆಗಿಯಾಕ ಹೋದಳು. ತೆಗಿಯಾಕ ಹೋದದ್ದು ಏಟೋ ಆಟಽ.

ಬಟ್ಟಿಗೆ ಬಟ್ಟು ತಾಕಿತೋ ಇಲ್ಲೋ... ಚೀ... ಇಬ್ಬರಿಗೂ ಮೈಯಾಗ ಒಂತರಾ ಕರಂಟ ಹೊಡಧಂಗಾಗಿ ದೊಡ್ಡ ಗಾತನ ಆತು! ಮೈಯಾಗ ಕರಂಟ ಹೊಡ್ಯಾಣಾ ಸಣ್ಣೀರಿ

ಲಜ್ಜೇದಿಂದ ನಾಚಿ ನೀರಾಗಿ ಒಮಿಗಿತಲೇ ಗಬಕ್ಕಂತ ಎದ್ದು ಎಡ್ಡೊಕ್ಕೈಲೀ ಪಟ ಪಟ ಹಿಂದಿನ ದೂಳಾ ಜಾಡಿಸಿಕೊಂತ ಆಕಡಿಂದ ಬರೋ ಯಾವದೋ ಬಸ್ಸಿನ್ಹಂತ್ಯಾಕ ಓಡಿದಳು.

ಆ ಕಡಿಂದ ಒಂದು ಉದ್ದಾನುದ್ದದ್ದು ಖಿಗ ಖಿಗ ಲಕ ಲಕ ಹೊಳಿಯೋ ನೀಲಿ ಬಣ್ಣದ್ದ ಲಕ್ಷುರೀ ಬಸ್ಸು ಬಂದು ನಿಲ್ಲೂತಲೇ ಅದರಾಗಿಂದ ಒಬ್ಬಾಂವ ಕಂಡಕಟರ ಮೈಸೂರಕಡಿ ಹಾರೂರಗತೆ ಹಣೇಮ್ಯಾಗ ನಾಮಾ ಬಳಕೊಂಡಾವಾ, ಡಾಯಿಬಿಟಿ ಬ್ಯಾನಿದ ನಿತ್ರಾಣ ಮೋತಿ ಮಾಡಿಕೊಂಡ ಗಡಿಬಿಡಿಯಿಂದ ಇಳದ ಗ್ವಾಡಿ ಹುಡಿಕ್ಕೊಂತ ಓಡಾಕ ಹತ್ತಿದ್ದ. ಸಣ್ಣೀರಿ ಹಂತಾ ಡಾಯಿಬಿಟಿ ಮನಿಶಾನ್ನ ಅಡ್ಡಗಟ್ಟಿ ''ಯರಗಟ್ಟಿಗೆ ಹೋಕ್ಕೈತೇನ್ರಿ ಬಸ್ಸೂ?'' ಎಂದು ಕೇಳಿದಳು. ತೊಗೋ ಕಂಡಕಟರ ಸಿಟ್ಟು ಬೆಂಕಿ ಆಗಿ ''ಏನಮ್ಮಾ.... ನಿನಗೆ ಗ್ಯಾನ ಇದ್ದೈ? ಹತ್ತ ಲಕ್ಷದ ಸುಪ್ಪರ್ ಡೀಲಕ್ಸ ಬಸ್ಸನ್ನ ನಿನ್ನ ಯರಗಟ್ಟಿಗೆ ಓಡಿಸಿದರ ಸರಕಾರ ಚೇಟಿ ಎತ್ತಬೇಕೆ?'' ಅನಕೊಂತ ಹಲ್ಲಕಚ್ಚಿ ಅಡಾಕಹತ್ತಿದ. ಪಾಪ ಡಾಯಿಬಿಟಿ ಒತ್ತರಾಗಿರಬೇಕು. ಸಣ್ಣೀರಿಗೂ ಶಿಟ್ಟ ಬಂತ, ''ಹೋಕ್ಕಿದ್ರ ಹೋಕ್ಕೈತ್ಯಂತ ಹೇಳು, ಇರದಿಕ್ಕ ಇಲ್ಲಂತ ಹೇಳು, ಅದೆಲ್ಲ ಬಿಟ್ಟು ತೆಲಗು ತಮಿಳು ಬಾಸೆದಾಗ ಬೆಯ್ಯತೈತಲ್ಲ ಇದು ಮೂಳ.'' ಅನಕೊಂತ ನೆಟಿಗಿ ಮುರಕೊಂತ ಮತ್ತ ಮಲಕಾಜಿ ಕುಂತಿದ್ದನಲ್ಲ ಅಲ್ಲೇ ಬಂದ್ಲು.

ಇಕಡೇ ಸುಣ್ಣದ ಕರಂಟ ಹೊಡದಾಗಿ ತೊಟ್ಟೂ ಮಲಕಾಜಿಗೆ ಸೊರ್ಗ ಎರಡS ಬಳ್ಳ ಉಳಧಾಂಗಾಗಿತ್ತು. ಅಂವ ಸುಣ್ಣದ ಡಬ್ಬೀ ಮ್ಯಾಗಿನ ಕನಡೀ ಹಳ್ಳಾಗ ತನ್ನ ಮೋತಿ ನೋಡಿಕೊಂತS ಏನೇನೋ ಧೇನಿಸಿಕೊಂತS ಮೀಶಾಗS ನಕ್ಕೊಂತ ಕುಂತಿದ್ದ.

ಸಣ್ಣೀರಿ ಬರಾಣಾ ಇಬ್ಬರಿಗೂ ಯಾಡ್ಡ ಮಿನೀಟು ಒಂತರಾ ನಾಚಿಕೆ ಬಂದಂಗಾಗಿ ಸುಮ್ಮಗ ಕುಂತರು. ಆಮ್ಯಾಗ ಏನಾರ ಮಾತಾಡಬೇಕಂತ ಮಲಕಾಜೀನ.

''ಲಕ್ಷನ ನೋಡಿದರ ಯರಗಟ್ಟಿ ಕಾರೇದ ಯಾಳೆ ಮುಗದ ನಿನ್ನವು ಯಾಡ್ಡೂ ಬಾಶಿಂಗ ಯರ್ತ ಆಗೂಗತೆ ಕಾಣತೈತಲ್ಲ?'' ಎಂದ.

''ಅಯ್ಯSS ಸುಬಾ ನುಡೀರಿSS ನಾ ಹೋಗೋ ಮಟ ಕಾರ್ಯೆ ಮುಗಸಾಂಗಿಲ್ಲವರು'' ಅಂದ್ಲು ಸಣ್ಣೀರಿ.

ಬಾಶಿಂಗದ ಮಾತು ಬಂತಂತೋ ಅತವಾ ಸುಣ್ಣದ ಬಟ್ಟ ಗೋಳಿಗೆ ಕರಂಟ ಹೊಡೆದಿತ್ತಂತೋ ಏನೋ, ಮಲಕಾಜಿ ಒಂದೀಟ ಮೈ ಛಳಿಬಿಟ್ಟು ಗನ ಧೈರ್ಯದಿಂದ ಸಣ್ಣೀರಿಗೆ

''ಅಲ್ಲ ಸಣ್ಣೀರವ್ವ ನಿನ್ನ ಗಂಡ ಮಕ್ಕಳೂ ಏನ ಮಾಡತಾರ? ದ್ಯಾಮಾಪೂರದಾಗ ಹೊಲಮನಿ ಅದಾವೋ ಹೆಂಗ?'' ಅಂತ ಕೇಳೇ ಬಿಟ್ಟ. ಸಣ್ಣೀರಿ ಕೇದದಿಂದ ಮೋತಿ ಸಣ್ಣದು ಮಾಡಿ ''ಮೂರು ವರುಷದ ಹಿಂದಲ ಉಗಾದಿಗೆ ಮದಿವ್ಯಾಗಿತ್ತು. ಮದಿವ್ಯಾಗಿ ಆತ ತಿಂಗಳಕ ಜ್ವಾಳದ ಕಟಾವ ಯಾಳೇದಾಗ ಹಾವು ಕಡದು ಹಿರ್ಯಾ ಗೊಟಕ್ ಅಂದ. ಮಕ್ಕಳಿಲ್ಲ... ಮರೀ ಇಲ್ಲ. ಅಣ್ಣನ ಮನ್ಯಾಗ ಒಪ್ಪೊತ್ತ ನೀಡಿದರ ಒಪ್ಪೊತ್ತS ಇರದಿರಕ ಅದೂ ಇಲ್ಲ... ಹಿಂಗ ಅದೇನೀ... ಆತು''. ಅನಕೋತ ನಿಟ್ಟುಸಿರು ಬಿಟ್ಟಳು. ಮಲಕಾಜೀ

''ಚೀ... ಚೀ.... ಚಿ ಗೈರ ಆತ ಸರಿ, ಇದೇನ ಬರಾಬ್ಬರಿ ಅಲ್ಲ... ತಗಿSS ಅನ್ನೇ... ಇದ ದೇವರ ಅನ್ನೇ....'' ಅನಕೋತ ಇನ್ನೂ ಏನೇನೋ ಹೇಳಾಕ ಕೇಳಾಕ ಉತಾವಳಿ ಆಗಿದ್ದ, ಆಟರಾಗ ಒಬ್ಬಾಂವ ಲಂಡಚಣ್ಣ, ಬನೀನ ಹಾಕಿದ ಕಿಲನರ ಗತೆ ಕಾಣೋ ಹುಡುಗ ಓಡೋಡಿಕೊಂತ ಇವರ ಕುಂತಲ್ಲೆ ಬಂದು ''ಯಲ್ಲಿ ಹೋಗಾವರ್‍ರೀ!'' ಅಂದ.

''ಯರಗಟ್ಟಿಗೆ'' ಅಂದ ಮಲಕಾಜಿ.

''ಹೂಂ ಬರ್‍ರಿ'' ಅನಕೋತ ಕಿಲನರ ಓಡಕೊಂತ ಹೊಂಟ.

ಸೂಕ್ಷ್ಮ ತಿಳಕೊಂಡಾವನ ಮಲಕಾಜಿ, ಸಣ್ಣೀರಿಗೆ ''ಮಾಲಗಾಡಿ ಕಾಲೀ ಹೊಂಟಿರಬೇಕ ಬಾ'' ಅನಕೊಂತ ಓಡಾಕ ಹತ್ತಿದ. ಅವನ ಹಿಂಬಾಲೆ ಸಣ್ಣೀರಿ ಬಾಶಿಂಗದ ಬುಟ್ಟಿ ಬಗಲಾಗ ಇಟಗೊಂಡ ಓಡಾಕ ಹತ್ತಿದಳು. ಈ ರೀತಿ ಕಿಲನರ, ಅವನ ಹಿಂಬಾಲೆ ಮಲಕಾಜಿ ಅವನ ಹಿಂಬಾಲೆ ಸಣ್ಣೀರಿ ಓಡಾಕ ಹತ್ತಿದ್ದ ನೋಡಿ, ಆಜೂ ಬಾಜೂದ ಪಾಸಿಂದರಗೋಳ ಸೈತ ''ಯಾವಲ್ಲಿಗೆ, ಯಾವಲ್ಲಿಗಿರೀ ಮಾಲಗಾಡಿ ಏನ್ರಿ'' ಅಂತ ಕೇಳಿಕೊಂತ ಇವರ ಹಿಂಬಾಲೆ ಓಡಾಕ ಹತ್ತಿದರು.

ಷ್ಟಾಂಡಿನ ಹೊರಗ ಲೇನ ಮ್ಯಾಲ ಒಂದ ಟ್ರಕ್ಕ ನಿಂತಿತ್ತು. ಆಗಲೇ ಅದರ ಸುತ್ತ ಮಂದಿ ಮುಕರಾಕ ಹತ್ತಿದ್ದರು, ಕೆಲಕೆಲವರು ಟಾಯರ ಗಾಲೀ ಮ್ಯಾಗ ಕಾಲಕೊಟ್ಟ ಹಿಂದ ಮಾಲ ತುಂಬೋ ಅಲ್ಲೆ ಹತ್ತಾಕ ಹತ್ತಿದ್ದರು. ಹಂತಾ ಗದ್ದಲದಾಗನS ಮಲಕಾಜೀ ಡ್ರಾಯಿವರ ಸಾಹೇಬರ ಹತ್ತು ರೂಪಾಯಿ, ಮ್ಯಾಗ ಒಂದು ಸಿಗರೇಟ ಕೊಟ್ಟು, ತನಗS ಸಣ್ಣೀರಿಗೆ ಮುಂದ ಕೇಬಿನದಾಗ ಡ್ರಾಯಿವರ ಬಾಜೂಕS ಜಾಗಾ ದೊರಕಿಸಿಕೊಂಡ. ಡ್ರಾಯಿವರ ಅವನ ಮಗ್ಗಲದಾಗ ಕಿಲನರ, ಕಿಲನರ ಬಗಲಾಗ ಮಲಕಾಜಿ, ಇಕಡೇ ಮಲಕಾಜಿ ಮತ್ತ ಬಾಗಲದ ನಡುವಣ ಸಣ್ಣೀರಿ. ಹಿಂಗೆ ಹತ್ತಂಡಿಯಾಗಿ ಕುಂತರು.

ಅದೊಂದು ಹಳೇ ಕಟಾರಾ ಟ್ರಕ್ಕು. ಗಡ ಗಡ ಗಡ ಗಡ ಸಪ್ಪಳಾ ಮಾಡಿಕೊಂತ ಹೊಯ್ದಾಡಿಕೊಂತ ಹೊಂಟಿತು. ರಸ್ತೇದ ಮ್ಯಾಗಿನ ಹೊಂಡಾ, ತೆಗ್ಗಿನ್ಯಾಗ ಧಡಕ್ ಧಡಕ್ ಅಂತ ಬಿದಗೊಂದ ಎದಗೊಂತ ಹೊಳ್ಳಿಕೆ ಬರೋ ಅಲ್ಲೆ ಒಪ್ಪಾರೆ ಆಗಿ 'ಒಲ್ಲ್ಯೋ ಬಗವಂತ'' ಅನಕೊಂತ ಲಿಕಿ ಲಿಕಿ, ಕಿರಿ ಕಿರಿ ಮಾಡಿಕೊಂತ, ಅತಗೊಂತ ಹೊಂಟಿತು.

ಮ್ಯಾಗ ಸುಡು ಬಿಸಿಲು, ಶಕಿ, ದೂಳು ಟ್ರಕ್ಕದ ಯಣ್ಣೀ ಉಗ್ರನಾತ, ಅದರಾಗ ಬ್ಯಾರೆ ಹೊಸಾಸೀರ ಕಣ ಮೈಗೆ ಒಂದಳತೀ ಚುಚ್ಚಾಕ ಹತ್ತಿದ್ದವು. ಹಂತಾದರಾಗ ಪಾಪ ಸಣ್ಣೀರಿ ''ದೇವ್ರ ಏನಾರ ಆಗಲಿ ಬಾಶಿಂಗ ಯರ್ತ ಆಗಬಾರದು... ದೌಡ ಮುಟ್ಟಸು... ಬಾಶಿಂಗ ಯರ್ತ ಮಾಡಬ್ಯಾಡಾ...'' ಅಂತ ಮನಸ್ಸಿನ್ಯಾಗ ಮಾದೇವಗ ಬೇಡಿಕೊಂತ ಕುಂತಿದ್ದಳು.

ಅಂತೂ ಯಿಂತೂ ಸಂಜೀ ನಾಕರ ಯಾಳೇಕ್ಕ ಬಿಸಲು ಇಳ್ಯೂ ಹೊತ್ತಿನ್ಯಾಗ ಮಲಕಾಜಿ ಸಣ್ಣೀರಿ ಯರಗಟ್ಟಿ ಮುಟ್ಟಿದರು.

ಟ್ರಕ್ಕ ಮ್ಯಾಗಿಂದ ಜಿಗಿದವರS ಇಬ್ಬರೂ ಓಡಿಕೊಂತ ಓಡಿಕೊಂತ ಗೌಡರ ಓಣ್ಯಾಗ ಹಾದು, ದೇಸಾಯರ ವಾಡೇ ದಾಟಿ, ತಿಪ್ಪಯ್ಯನ ಮಠದ ಬಗಲಾಗಿಂದ, ಊರ ಹೊರಗ ಹಳ್ಳದ ದಂಡೀ ಮ್ಯಾಗ ಯೀರಬದ್ರ ದೇವರ ಗುಡಿಗೆ ಬಂದ ಮುಟ್ಟಿದರು. ಸಣ್ಣೀರಿ ಅಣ್ಣನ ಮಗನ ಕಾರೇ ಅಲ್ಲೇ ನಡ್ಯೂದಿತ್ತು. ಮತ್ತು ಅದಕ್ಕಂತ ಪಾಪ ಸಣ್ಣೀರಿ ಬಾಶಿಂಗ ತಗೊಂಡು ಓಡ್ಯೂಡಿ ಓಡ್ಯೋಡಿ ಬಂದ್ಲು.

ಬಂದ್ಲೇನೋ ಕರೆ! ಆದರ ಆದದ್ದ ಬ್ಯಾರೆ!!

ದ್ಯಾಮಾಪುರದವರು, ಅಂದ್ರ ಸಣ್ಣೀರಿ ಅಣ್ಣ, ಅಣ್ಣನ ಹೇಣ್ತಿ ಕೂಡಿದ ಮಂದೆಲ್ಲ ಮದ್ಯಾನ ಎರಡರ ಮಟ ಸಣ್ಣೀರಿದೂ ಬಾಶಿಂಗದ್ದೂ ಹಾದಿ ನೋಡಿ ನೋಡಿ ಬ್ಯಾಸತ್ತು, ಕಡೀಕ ಉರಾಗಿನ ಹುಡುಗನೊಬ್ಬನ್ನ ಘಟಘಟಿ ಮ್ಯಾಗ ಗೋಕಾಕಕ್ಕ ಕಳಿಸಿ ಬ್ಯಾರೇನ ಎಡ್ಡ ಬಾಶಿಂಗ ತರಿಸಿಕೊಂಡು ಲಗ್ಗಣ ಕಾರೇ ಮುಗಿಸಿಕೊಂಡ, ಹುಗ್ಗೀ ರೊಟ್ಟಿ ತಿಂದ, ಅಡ್ಡ ಮಳಿ ದಿವ್ಸ ಅಂದು ತಮ್ಮ ತಮ್ಮ ಚಕಡಿ, ಟ್ಯಾಕ್ಟರ ಹೊಡಕೊಂಡ ಹೊಳ್ಳಿ ದ್ಯಾಮಾಪುರಕ್ಕ ಹೋಗಿ ಬಿಟ್ಟಿದ್ದರಂತ. ಸಣ್ಣೀರಿ ಬಂದಾಗ ಬರ್ಲಿ ಅನಕೊಂಡ.

ಕಾರೇದ ಉಳದದ್ದ ಹುಗ್ಗೀ ರೊಟ್ಟಿ ತಿನಕೊಂತ ಕೂತಂತ ಒಂದಿಬ್ಬರು ದನ ಕಾಯೋ ಹುಡುಗರು ಇಷ್ಟೆಲ್ಲ ನಡದದ್ದ ಹಕೀಕತ್ತು ಹೇಳಿದರು.

ನಡದಂತಾ ಗಟನಾವಳಿ ಕೇಳಿ ಸಣ್ಣೀರಿ ಪಾಪ ದುಕ್ಕ ತಡೀಲಾರದ ಬಡಬಡಕೊಂಡ ಅಳಾಕ ಚಾಲೂ ಮಾಡಿದಳು. ''ಅಯ್ಯೊ ನನ್ನ ಕತೀನ.... ನನ್ನ ಹಣೇಬರನ ಖೊಟ್ಟಿ ಆಯ್ತಿ... ನನ್ನ ನಶೀಬನ ಹರಕೈತಿ... ನನ್ನ ದೈವನ ಕುರಡೈತಿ... ಬಾಶಿಂಗಗೋಳು ಯರ್ತ ಆಗಬಾರದಂತ ಓಡೋಡಿ ಬಂದೆನಲ್ಲೋ ಯಣ್ಣಾ....'' ಅನಕೊಂತ ಒಂದಳತೀ ದುಕ್ಕ ಬಡಾಕ ಹತ್ತಿದಳು.

ಪಾಪ ಮಲಕಾಜಪ್ಪ ಸಹಿತ ಮನಸ್ಸಿಗೆ ಖಜೀಲ ಅನಿಸಿಕೊಂಡ. ಯಷ್ಟ ಒದ್ದ್ಯಾಡಿದರೂ ಬಾಶಿಂಗ ಯರ್ತ ಆದೂವಲ್ಲಾ ಅಂತ ಮೋತಿ ಒಂಥಾರಾ ಮಾಡಿಕೊಂಡ ಕೇದದಿಂದ ನಿಂತಿದ್ದ, ಬಾಜೂಕನS ಬಡಬಡಕೊಂತ ಅಳೋ ಹೆಣ್ಣ ಹೆಂಗಸು... ಹೆಣ್ಣು ಬಾಲಿ, ಆಕಿನ್ನ ಹೆಂಗ ಸಮಾದಾನ ಮಾಡೋದು... ಹೇಂಗ ಸಮಜಾಯಿಸಿ ಹೇಳೂದ ತಿಳೀದ ಮರ ಮರ ಮರಗಿದ. ಕಡೀಕ ತಾನS ಆಕಿ ಹಂತೆಕ್ಕ ಕುಂತ.

''ಹೋಗ್ಲಿ ಬಿಡ. ಕಾರೆ ಆಗೇತೆಂತಲ್ಲ... ಅದೂ ಅಲ್ಲದ ನೀ ಏನ ಬೇಕಂತ ಮಾಡಿದ್ಯಾ... ಯಾಳೆಸೀರ ಬಸ್ಸು ಸಿಗದಿರಕ ನಿಂದರ ಏನತೆಪ್ಪ.... ಸಾಕಮಾಡ ಇನ್ನ... ಎಷ್ಟದ ಅಳೋದಾ?'' ಅನಕೊಂತ ತನಗ ತಿಳಿದಂಗ ಆಕಿನ್ನ ಸಮಾದಾನ ಮಾಡಾಕ ಹತ್ತಿದ.

ಆದರೂ ಸಣ್ಣೀರಿ ದುಕ್ಕದಿಂದ ಬಿಕ್ಕಿಗೊಂತ ''ನಿಮಗ ಗೊತ್ತಿಲ್ಲರೀ... ನಮ್ಮಣ್ಣ ಎಡ್ಡದಿನ ಶಿಟ್ಟಮಾಡಿ ಸುಮ್ಮಗಾದಾನು... ಆದ್ರ ಆದ್ರ ನಮ್ಮಣ್ಣನ ಹೇಣ್ತಿ... ನಮ್ಮತ್ತಿಗಿ... ನಿಮಗೊತ್ತಿಲ್ಲರೀ....'' ಅನಕೊಂತ ಮತ್ತ ಮತ್ತ ದುಕ್ಕಸಾಕ ಹತ್ತಿದಳು.

ಮಲಕಾಜಪ್ಪ ಎರಡ ಮಿನಿಟ ಯೋಚನೆ ಮಾಡಿದ. ಮಧ್ಯಾಣ ಕಿತ್ತೂರ ಬಷ್ಟ್ಯಾಂಡನಾಗ ಸಣ್ಣೀರವ್ವನ್ನ ನೋಡಿದಾಗಿನ ತೊಟ್ಟು ಅವನ ತಲ್ಯಾಗ ಒಂದ ಯಿಚಾರ ಸುಳಿಯಾಕ ಹತ್ತಿತ್ತು. ಆ ಮ್ಯಾಗ ಈಗ ನಡದಂತ ಪರಸಂಗ ಎಲ್ಲಾ ನೋಡಿ ಆ ಯಿಚಾರ ಗಟ್ಟಿ ಆದಂಗಾತು. ಅಂವ ನಡಗೂ ಕೈಲೇ ಸಣ್ಣೀರಿ ತಲೀಮ್ಯಾಗ ಹಗರಕ ಕೈ ಆಡಿಸಿಕೊಂತ ಹೇಳಾಕ ಹತ್ತಿದ. "ಚಿಂತಿ ಮಾಡಬ್ಯಾಡ... ನಿನಗೊಂದ ಮಾತ ಹೇಳೋದೈತಿ. ನೋಡು ನೀ ಹ್ಯಾಂಗ್ ಗಂಡನ್ನ ಕಳಕೊಂಡ ಮಕ್ಕಳು ಮರಿ ಇಲ್ಲದ ಉಡಕೀ ಹೆಂಗಸ ಅದಿಯೇ ಹಂಗS ನಾನೂ ಹೆಣ್ತೀನ ಕಳಕೊಂಡ ಇಮನೀ ಗಂಡ ಅದೇನು. ಹ್ವಾದ ವರಸ ಮದಿವ್ಯಾಗಿತ್ತು. ಒಮ್ಮಗಿಲೇ ಕಟ್ಟಿನ ಜ್ವರ ಬಂದು ಮನಿಯಾಕಿ ಹೋಗಿಬಿಟ್ಟಳು. ಮನ್ಯಾಗ ಅವ್ವ ಮುದಿಕಿ ಒಬ್ಬಾಕೇನ ಅದಾಳು. ಒಂದಳತೀ ಇನ್ನೊಂದ ಮಾಡಿಕೋ ಇನ್ನೊಂದ ಮಾಡಿಕೋ ಅಂತ ತಗಾದೆ ಹಚ್ಚಿರತಾಳು. ಊರಾಗಿನ ಹಿರಾರಯ್ಯಾಡಿಂದ ಸಹಿತ ಹೇಳಿಸ್ಯಾಳ. ನಾವು ಇದ ಯರಗಟ್ಟೀವರು. ನಾಕು ಕೂರಿಗೆ ಹೊಲಾ ಆದಾವು. ಊರಾಗ ಮನೀ ಆಯ್ತಿ. ನಾಲಕೆತ್ತಿನ ಕಮತ ಅಯ್ತಿ... ಹೊಟ್ಟಿ ಬಟ್ಟೀ ಚಿಂತಿಲ್ಲ... ನಿ ಅರ ಎಷ್ಟ ದಿವ್ಸಂತ ನಿಮ್ಮಣ್ಣನ ಹೇಣ್ತಿ ಕೈಯಾಗ ಸೋಸತಿ... ಅದಕ್ಕೆ ಮತ್ತ ನಿ ಹೂಂ ಅಂದರ ಹ್ಯಾಗೂ ನೀ ತಂದದ್ದ ಎಡ್ಡ ಬಾಶಿಂಗ ಅದಾವು".... ಅಂತ ಅರ್ಧ ಧೈರ್ಯ ಅರ್ಧ ಹೆದರಿಕೆಯಿಂದ ಕಮ ಕಮ ಅಂತ ಹೇಳಿಬಿಟ್ಟ.

ಮಲಕಾಜಿ ಹೇಳೋದನ್ನೆಲ್ಲ ಕೇಳೊ ಮುಂದ ಸಣ್ಣೀರಿ ಮನಸ್ಸಿನ್ಯಾಗ ಏನ ದುರಗಮುರಗಿ ಆಟ ನಡೆದಿತ್ತೋ ಆಕಿಗೆ ಗೊತ್ತು. ಆಕಿ ತುಂಬಿದ ಎರಡೂ ಕಣ್ಣಗೋಳನ್ನ ಮ್ಯಾಲೆತ್ತಿ ಮಲಕಾಜಿ ಕಡೆ ಒಮ್ಮೆ ನೋಡಿ ಮತ್ತ ತಲಿ ತಗ್ಗಿಸಿ "ಅಯ್ಯ ಶಿವನ ಏನ ಮಾತಾಡಕ ಹತ್ತೀರಿ" ಅನಕೊಂತ ಕೆಂಪಗ ಚಪ್ಪರಬದನೀಕಾಯಿಗತೆ ಆದಳು.

ಮಲಕಾಜಿ "ಕೇಳSS ದೇವರS ನನ ಬಾಯಾಗ ಕುಂತ ಈ ಮಾತು ಆಡಿಸ್ಯಾನಂತ ತಿಳಿ. ನೋಡೆರ ನೋಡ ನಿನ್ನ ಹೆಂಗ ಅಂಗೈಯಾಗಿನ ಅರಗಿಣಿ ಹಂಗ ಸಾಕತೇನ. ನನಗೂ ಯಾರಿಲ್ಲ... ನಿನಗೂ ಯಾರಿಲ್ಲ... ಅಷ್ಟಲ್ಲದ ಬಾಶಿಂಗ ಯರ್ತ ಆಗಬಾರದಲ್ಲ ನೀ ಹೂಂ ಅರS ಅನ್ನು" ಅಂತ ದೈನಾಸ ಬಟಗೊಳ್ಳಾಕ ಹತ್ತಿದ.

ಸಣ್ಣೀರಿ "ಹೂಂ"ನು ಅನಲಿಲ್ಲ. "ಹಾಂ"ನೂ ಅನಲಿಲ್ಲ. ಮೋತಿ ಕೆಳಗ್ಹಾಕಿ ಹಲ್ಲಾಗ ಸೆರಗ ಜಗ್ಗಿಕೋತ, ಎಡಗಾಲ ಹೆಬ್ಬಟ್ಟಲೇ 'ಠ್ಯೊಂ' ಅಂತ ಒಂದ ಅರ್ಧ ರೌಂಡ ಗಿರಿಮಿಟ ಎಳೆದಳು, ಅರ್ಧ ಚಂದ್ರಾಮನಗತೆ.

ಹರೇದ ಹೆಣಮಗಳು, ಚಪ್ಪರಬದನೆಕಾಯಿಗತೆ ಕೆಂಪ ಮೋತಿ ಮಾಡಿಕೊಂಡು ಹಲ್ಲಾಗ ಸೆರಗ ಸಿಗಿಸಿಕೊಂಡ ಎಡಗಾಲ ಹೆಬ್ಬಟ್ಟಲೇ ನೆಲದಮ್ಯಾಗ ಠ್ಯೊಂ ಅಂತ ಅರ್ಧ ಚಂದ್ರಾಮನ್ನ ಗೀರಿದರ ಅದರ ಅರ್ಥ ಏನಾಕ್ಕೈತಿ ಅಂತ ತಿಳಿದಿಟ ದಡ್ಡೇನಲ್ಲ ಮಲಕಾಜಿ ಆದರೂ ಆಕಿ ಬಾಯಿಂದನS ಕೇಳಬೇಕಂತ "ಹಂಗಾರ ಏನ ಅಂಥಂಗಾತು" ಅಂದ.

ಸಣ್ಣೇರಿ ಮೋತಿ ಮ್ಯಾಲ ಎತ್ತದನS ''ನಂದೇನ ಹೆಂಗೋ ಆಕ್ಕೈತಿ, ಆದ್ರ ಪಾಪ ಬಾಶಿಂಗ ಯರ್ತ ಆಗಬಾರದಲ್ಲಾ'' ಅಂದ್ಮು, ಆಕಿನೂ ಬೆರಕಿ.

ಮಲಕಾಜಪ್ಪಗ ಸೋರ್ಗ ಒಂದS ಬಳ್ಳ ಉಳಧಂಗಾತು. ಬಡಾಬಡಾನ ಆ ದಸಾ ಕಾಯೋ ಹುಡಗೂರನS ಊರಾಗ ಹಚಕೊಟ್ಟ ಹಿಂಗಿಂಗ ಆಗೇತಿ ಹಿಂಗಿಂದ ಹಿಂಗ ಹೀಂಗಾಗಿ ಹಿಂಗ, ಅಂತ ತನ್ನ ಮುದಕಿ ಅವ್ವಗ, ಗೆಳ್ಯಾತಿಗೆ ಹತಗಡೆಯವರಿಗೆ ಯಲ್ಲಾರಿಗೂ ಹೇಳಿ ಕಳಸಿದ. ಅಯ್ಯನೋರನ, ಬ್ಯಾಂಡ ಬಾಜದವರನ, ಸುಬದ ಆರತಿಗೆ ಗರತೇರನ, ಯಲ್ಲಾರನೂ ಕರೆಸಿದ. ದ್ಯಾಮಾಪೂರಕ್ಕ ಟ್ರ್ಯಾಕ್ಟರ ಹಚಗೊಟ್ಟ ಸಣ್ಣೇರಿ ಅಣ್ಣನ್ನ ಮತ್ತ ಬಾಕೀ ಪಾವಣೇಗೋಳನ್ನ ಕರ್ಯಾಕ ಕಳಿಸಿದ.

ಹಾಂ ಹಾಂ ಅನ್ನೊಪರಾಗ ಊರಾಗಿನ ಮಂದೆಲ್ಲ ಎದ್ದಬಂತು. ಮಕಲಾಜಿ ಯಲ್ಲಾರಿಗೂ ಬೇಕಾದವಾಗಿದ್ದ. ಹಿಂಗಾಗಿ ಭಕಲಡ್ಯಾಗ, ಟ್ರ್ಯಾಕ್ಟರದಾಗ ಫಟಫಟಿ ಮ್ಯಾಗ ಸಾಯಕಲ್‌ಮ್ಯಾಗ ಜನ ಓಡೋಡಿ ಬಂದರು. ಅಯ್ನೋರು ಬಂದರು ಗರತೇರು ಬಂದರು. ನಡುಪಟ್ಟಿ ಒಡ್ಡ್ಯಾಣ, ಗುಳದಾಳಿ ಮುಗಬಟ್ಟು, ಬೇತಲಮಣಿ ಯಬ್ಬಾವತ್ ದಾಗೀಣ ತೊಗೊಂಡು ಮಲಕಾಜಿ ಅವ್ವ ಬಂದಳು. 'ಸಂಗಮೇಶ್ವರ ಬ್ಯಾಂಡ ಕಂಪನಿ'ಯವರು ಚಂದಾಗಿ ಕೆಂಪು ಹಸಿರು ಅಂಗಿ ಚೊಣ್ಣ ಹಾಕ್ಕೊಂಡ ಬಂದ ''ಯಮ್ಮೀ ನಿನಗ ಸಾಟಿಯಿಲ್ಲ...'' ಬಾರಸಾಕ ಹತ್ತಿದರು. ಅದು ಆದ ಮ್ಯಾಗ ''ಧೂರದಿಂದ ಬಂದಂಥಾ ಸುಂದರಾಂಗ ಜಾಣ'' ಬಾರಿಸಿದರು.

ಇಷ್ಟೆಲ್ಲಾ ಆಗೂಮಟ, ಮಂದೆಲ್ಲಾ ಕೂಡುಮಟ ಅಂದ್ರ, ಹಗರ ಹಗರಕ ಸಂಜಿ ಪಸರಸಾಕ ಹತ್ತಿತ್ತು. ಕಡೀ ಕನಕರದ ಹಿಂಡು ಅಂಬಾ ಅಂಬಾ ಅನಕೋತ ಓಡಿಕೋತ ಚಿಮ್ಮಿಕೊಂತ ಹೊಳ್ಳಿ ಮನೀಗೆ ಹೊಂಟದ್ದೂ, ಆಕಾಶದಾಗ ಬೆಳ್ಳಕ್ಕಿ ಸಾಲು ಬುರ್‍ರಂತ ತರತರದ ಚಿತ್ತಾರ ಬರಕೊಂತ ಹಾರಿ ಹೊಂಟಿದ್ದೂ, ಎಡ್ಡ ಮೂರು ಹಂಚಿನ ಮನೀ ಮ್ಯಾಗಿಂದ ಆಗಲೇ ರೊಟ್ಟಿಸುಡೋ ಹೊಗೀ ಮ್ಯಾಗಯದ್ದು ಹವಾದಾಗ ಕುಡಾಕಹತ್ತಿತ್ತು. ಊರಾಗಿನ ಯಂಕಟೇಶ ದೇವರ ಗುಡಿ ಕಟ್ಟಿ ಮ್ಯಾಗ ಕುಂತ ಸಾಬರ ಮಮದೂ ಚೌಘಡಾ ಬಾರಸಾಕ ಹತ್ತಿದ್ದ. ಆಕಡಿ ಡಬಗಳ್ಳಿ ಕಂಟೀ ಸಾಲ ಮ್ಯಾಗ ಪರಾತದಂತಾ ಹಳದೀ ಚಂದಪ್ಪ ಮೂಡಿ ಬರಾಕ ಹತ್ತಿದ್ದ.

ಇಂತಾ ಚಂದನ್ನ ಗೋದುಳಿ ಮುಹೂರ್ತದಾಗ ಮ್ಯಾಗ ಆಕಾಶ ಮಾರ್ಗದಾಗ ನಂದೀ ಮ್ಯಾಗ ಕುಂತಗೊಡ, ಶಿವಾ ಪಾರ್ವತಿ ಆಕಡೆ ವಿಜಾಪುರದಿಂದ ಜಮಕಂಡಿ, ಮುದ್ದೋಳ, ಗೋಕಾಕ ಮಾರ್ಗದಿಂದ ಯರಗಟ್ಟಿ, ಸವದತ್ತಿ, ಯುಬ್ಬಳ್ಳಿ ಮ್ಯಾಗ ಹಾದು ಶ್ರೀಶೈಲಕ್ಕ ಹೊಂಟಿದ್ದರು. ಹುಬ್ಬಳ್ಯಾಗ ವಸ್ತಿ ಮಾಡೂಯಿಬಾರ ಇಟಗೊಂಡಿದ್ರು. ಕರೆಕ್ಟ ಯರಗಟ್ಟಿ ಆಕಾಶದಾಗ ಹಾಯೂಮುಂದ ಪಾರೋತಿ ತೆಳಗ ಯಿರಬದ್ರ ದೇವರ

ಗುಡ್ಯಾಗ ನಡದಂತ ಸಣ್ಣೀರಿ ಲಗ್ಗಣ ಕಾರೇ ನೋಡಿ ಗಂಡಗ ''ತರಬರೀ.... ಒಂದೀಟ ತರಬರಿ'' ಅಂದಳು.

''ಚೇ ಮುಂಚೇಕ ಲೇಟ ಆಗೇತಿ, ದೌಡ ಹುಬ್ಬಳ್ಳಿ ಮುಟ್ಟದಿದ್ದರೆ ಪ್ಯಾಟೆಲ್ಲ ಬಂದ ಆಕ್ಯಾವು. ಅಮ್ಯಾಗ ನಂದಿಗೆ ಮೇವು ಹಿಂಡಿ ಸಹಿತ ಸಿಗಾಕಿಲ್ಲ'' ಅಂದ ಪರಶಿವ ''ಅಯ್ಯ ಒಂದೀಟ ತರಬರೀ ಕೆಳಗ ಕಾರೇ ನಡದೈತಿ ನೋಡಣು'' ಅಂದಳು ಪಾರೋತೆಕ್ಕ.

''ಯಾಕ ಲಗ್ಗಣ ಯಂದೂ ನಡದವರ್ಹಂಗ ಮಾಡಾಕ ಹತ್ತೀಯಲ್ಲ. ದಿವ್ಸಾ ನೂರಾರು ಕಾರೇ ಆಗತಿರತಾವು...'' ಅಂತ ಪರಮೇಶ್ವರ. ''ನೂರಾಗಲಿ ಸಾವೇರಾಗಲೀ ಇದ ನಮ್ಮ ಕಣ್ಣಮುಂದ ನಡದೈತಿ ಅಂದ ಮ್ಯಾಗ ನಿಂತ ಆಶೀರ್ವಾದ ಮಾಡಕ ಬೇಕಲ್ಲ ಒಂದೀಟಽ ಈಟಽ ತರಬರಿ'' ಎಂದು ದಂಬಾಲು ಬಿದ್ದಳು ಮಾದೇವಿ.

ಶಿವಾ ಇರಲಿ, ಅವರಪ್ಪ ಇರಲಿ ಹೇಣ್ತಿ ಮಾತ ಅಂದಮ್ಯಾಗ ಕೇಳಾಕ ಬೇಕಲ್ಲ, ಅಂತಽ ಶಿವಾ ನಂದೀ ಹಗ್ಗ ಜಗ್ಗಿ ''ಹೋಪ... ಹೋಪ ಹಪ್... ಹಗರ...ಹಗರ'' ಅನಕೊಂತ ಕರೆಕ್ಟ ಲಗ್ಗಣ ಕಾರೇ ನಡದಲ್ಲೇ ಮ್ಯಾಗ ಆಕಾಶದಾಗ ನಿಂದರಸಿದ. ಶಿವ ಪಾರ್ವತಿ ಇಬ್ಬರೂ ಮ್ಯಾಗಿಂದ ಕಾರೆ ಎಲ್ಲಾ ನೋಡಿ ಸಂತೋಷವಪಟ್ಟು ಸಣ್ಣೀರಿಗೆ ಮಲಕಾಜಿಗೆ ಆಶೀರ್ವಾದ ಮಾಡಿ ಮುಂದ ಹೊಂಟಾಗ ಇದ್ದಕ್ಕಿದ್ದಂಗ ಪಾರೋತೆಕ್ಕ ಕಿಸಕ್ಕಂತ ನಕ್ಕಳು.

''ಮತ್ತೇನ ಕಿತಬಿ ನಿಂದ, ನಗೂಹಂತೆದೇನಾತೀಗ?'' ಅಂತ ಕೇಳಿದ ಪರಮೇಶಿ. ''ಏನಿಲ್ಲ ಮತ್ತ ಸಾವಿರಾರ ವರ್ಸದ ಹಿಂದನಽ ನಾ ತಪಸ್ಸಿಗೆ ಕುಂತಾಗ ಆ ಕಿಡಿಗೇಡಿ ಕಾಮಣ್ಣನ್ನ ಸುಟ್ಟು ಬಸ್ಮ ಮಾಡಿದ್ರೆಲ್ಲ? ಈಗ ನೋಡಿದ್ರ ಇನ್ನೂ ಅವನ ಬಾನಗಡಿ ನಿಂತಂಗ ಕಾಣುದುಲ್ಲಲ್ಲ... ಆ ಮಲಕಾಜಿನ್ನ ನೋಡರಿ ಆ ಹುಡುಗಿ ಸಣ್ಣೀರಿ ಹಿಂಬಾಲೆ ಹ್ಯಾಂಗ ಪೆದ್ದ ಆಗ್ಯಾನ'' ಅಂದಳು ಶಿವಕ್ಕ. ಶಿವ ಸಹಿತ ನಕ್ಕೊಂತ ''ಹೌಂದ ಮತ್ತ ನಾನಽ ಪಾಪಂತ ಮತ್ತ ಕಾಮಣ್ಣನ್ನ ತಿರುಗಿ ಹುಟ್ಟಿಸಿದೆ.' ಇರದಿಕ್ಕರ ಜಗತ್ತಿನ್ಯಾಗಿನ ಬಾಶಿಂಗಗೋಳೆಲ್ಲ ಯರ್ತ ಆಗಿ ಹೋಕ್ಕಿದ್ದವಲ್ಲ....'' ಅಂದಾವನ ನಂದೀ ಹಗ್ಗ ಸಡಲ ಬಿಟ್ಟ ಯಡ್ಡೂ ಕೈಲೇ ಲಗಾಮ ಜಗ್ಗಿಕೊಂತ ''ಹುರ್‍ಯಾ ಹಲ್ಯಾ.... ಹೋಳಾಗರೀ'' ಅನಕೋತ ಹುಬ್ಬಳ್ಳಿಗೆ ದೌಡಾಯಿಸಿದ.

ಈ ರೀತಿ ಅವತ್ತ ಚಿಟಗೀ ಹೊಡೆಯೂದರಾಗಽ ಯರಗಟ್ಟಿ ಊರ ಹೊರಗ ಹಳ್ಳದ ದಂಡೀ ಮ್ಯಾಗ ಯೀರಬದ್ರ ದೇವರ ಗುಡ್ಯಾಗ, ದ್ಯಾಮಾಪುರದ ಉಡ್ಕೀ ಹೆಂಗಸು ಸಣ್ಣೀರವ್ವನಿಗೂ ಮತ್ತೂ ಯರಗಟ್ಟಿಯವನ ಇಮನೀ ವರ ಮಲ್ಲಿಕಾರ್ಜುನಪ್ಪನಿಗೂ, ಬೈಲಹೊಂಗಲದ ಸ್ವಾಮಗೋಳ ಆಶೀರ್ವಾದ ಮಾಡಿ ಕೊಟ್ಟಂತಾ ಬಾಶಿಂಗ ಕಟ್ಟಿ ಅಯ್ನೂರು, ಊರವರು ಸೇರಿ ಲಗ್ಗಣ ಕಾರೇ ಹೊಡೆಸಿ ಬಿಟ್ಟರು.

ಬುದ್ಧ, ಬುದ್ಧ, ಬುದ್ಧ

- ವೈ. ನಾರಾಯಣ ಶರ್ಮ

ಜಗವೆಲ್ಲ ಮಲಗಿರಲು ಅವನೊಬ್ಬ ಎದ್ದ!

ಹೀಗೆ ಪಲಕುತ್ತದೆ ಬುದ್ಧನ ನಿದ್ದೆ ಕುರಿತು ಕವಿವಾಣಿ. ಇದರ ಹಿನ್ನೆಲೆ ಏನು ಬಲ್ಲಿರಾ? ಬುದ್ಧ ನಿದ್ರಾಹೀನ ಸ್ಥಿತಿಯಿಂದ ಸದಾ ಬಳಲುತ್ತಿದ್ದ; ಅಂದರೆ insomnia ಎಂದು ಆಧುನಿಕ ಮನೋರೋಗ ತಜ್ಞರ ಅನಿಸಿಕೆ, ಕಾರಣ ಅವನು ಅರಮನೆಯ ಹಂಸತೂಲಿಕಾ ತಲ್ಪದಲ್ಲಿ ಪವಡಿಸಿದ್ದಾಗಲೂ ಯಾವುದೋ ಕಾಣದ ಚಿಂತಾಕೀಟವೊಂದು ಅವನ ತಲೆಕೊರೆಯುತ್ತಿದ್ದಂತೆ, ಪಾಪ! ಎಷ್ಟು ಕಾಲ ಆ ಬಡಪಾಯಿ ಬುದ್ಧ ನಿದ್ದೆಯಿಲ್ಲದೆ ರಾತ್ರಿಗಳನ್ನು ದೂಡಿದನೋ? ಈಗ ಗಲ್ಲಿಗಲ್ಲಿಗಳಲ್ಲಿ ಇರುವ ಮಾನಸಿಕ ರೋಗ ತಜ್ಞರು ಆ ಕಾಲದಲ್ಲಿದ್ದಿರಲಾರರು. ಇದ್ದಿದ್ದರೆ ಬುದ್ಧ ಕಾಡಿ-ಬೇಡಿಯಾದರೂ ಖಂಡಿತ ಚಿಕಿತ್ಸೆ ಪಡೆದು ಗುಣಮುಖನಾಗುತ್ತಿದ್ದನೇನೋ. ಆತನನ್ನು ನಿದ್ದೆ ಈ ಪಾಟಿ ಕಾಡಿಸಿ, ಪೀಡಿಸಿ ಗೋಳುಹೊಯ್ದುಕೊಳ್ಳಬಾರದಿತ್ತು. ನಿದ್ದೆಯಿಲ್ಲದೆ ರೋಸಿ-ರೋಸಿ ಕೊನೆಗೊಮ್ಮೆ ಮಧ್ಯರಾತ್ರಿ ಪಟ್ಟಾಗಿ ಗೊರಕೆ ಹೊಡೆಯುತ್ತಿದ್ದ ಹೆಂಡತಿ-ಮಗುವನ್ನು ತೊರೆದು ಕಾಡಿನ ಪಾಲಾದ. ಇದು ಇಂದಿಗೆ ಇತಿಹಾಸ; ನನ್ನ ನಂಬಿಕೆಯಂತೆ ಇದು ಪುರಾಣ. ನೀವು ನನ್ನ ಮಾತನ್ನು ಖಂಡಿತ ನಂಬಿ.

ಹೋಗಲಿ ಹಗಲಲ್ಲಿ ಬುದ್ಧ ನಿದ್ದೆ ಹೋಗುತ್ತಿದ್ದನೇ? ...

ಇಲ್ಲವೆಂದೇ ನನ್ನ ಊಹೆ. ಅದಕ್ಕೆ, ತಪಸ್ಸು, ಧ್ಯಾನ, ಜ್ಞಾನಿಗಳೊಂದಿಗೆ ಚರ್ಚೆ ಮಾಡಿ ಹಗಲು ನೂಕುತ್ತಿದ್ದ. ಹೀಗಾಗಿ, ಪಾಪ, ಹಗಲಲ್ಲೂ ನಿದ್ರಾಹೀನತೆ. ಇನ್ನು ಜ್ಞಾನೋದಯವಾದ ಮೇಲೆ ಜ್ಞಾನ ಪ್ರಸಾರ ಮಾಡುತ್ತಾ ಊರೂರು, ಕೇರಿಕೇರಿ ಅಲೆದಾಟ. ಆತನಿಗೆ ಹಗಲು-ರಾತ್ರಿಗಳೆರಡೂ ಒಂದೇ. ಜೀವನವಿಡೀ ನಿದ್ರಾಹೀನತೆಯಿಂದ ಬಳಲಿ, ಬಸವಳಿದು, ಬೆಂಡಾಗಿ ಕೊನೆಗೊಮ್ಮೆ ಚಿರನಿದ್ರೆಗೊಳಗಾದ. ಬುದ್ಧ ನಿದ್ರಿಸದೆ ಜ್ಞಾನಿಯಾದ. ನಾವು ...? ನಿದ್ರಾಹೀನತೆಯಿಂದ ಬಳಲಿದರೆ ಜ್ಞಾನಿಗಳಾಗುವರೇ? ಎಂದು ಪಾಟೀಸವಾಲು ಹಾಕಬೇಡಿ.

ನನಗೂ ಬುದ್ಧನಿಗೂ ಒಂದು ರೀತಿಯ ನಂಟಸ್ತಿಕೆ; ಇಬ್ಬರದೂ ಒಂದೇ ಜಾತಕ. ಬುದ್ಧ ಗೃಹತ್ಯಾಗಿ, ನಾನೋ ''ಗೃಹ-ಸ್ಥ'' ಅಂದರೆ ಸ್ವಾರ್ಥಬೆಕ್ಕಿನಂತೆ ಮನೆಗೇ ಅಂಟಿಕೊಂಡವನು. ಬುದ್ಧನಂತೆ ನಾನೂ ಕೆಲಕಾಲ ನಿದ್ರಾಹೀನತೆಗೆ ಬಲಿಯಾಗಿದ್ದೆ. ಏನೇನು ಮಾಡಿದರೂ ನಿದ್ದೆ ಬಾರದೆ ನಾನು ಪಟ್ಟ ಪಾಡು ಕೇಳಿದರೆ, ''ಅಯ್ಯೋ ಪಾಪ!'' ಎಂದು ನನ್ನ ಬಗ್ಗೆ ನೀವೆಲ್ಲ ಕನಿಕರವೋ ಸಹಾನುಭೂತಿಯೋ ತೋರುವುದು ಖರೆ.

ನಾನು ನುಗ್ಗಿದ ಆಸ್ಪತ್ರೆ, ಕ್ಲಿನಿಕ್ಕು, ಚಿಕಿತ್ಸಾಲಯ ಮತ್ತು ಎಮರ್ಜೆನ್ಸಿ ಬಿದ್ದಾಗ ನೋಡದ ಡಾಕ್ಟರು, ಅಳಲೆಕಾಯಿ ಪಂಡಿತರು, ಹಕೀಮರು, ನರರೋಗ ತಜ್ಞರು, ಮಾನಸಿಕ ರೋಗ ಮಹಾಮೇಧಾವಿಗಳು, ಎಷ್ಟೆಂದು ಹೇಳಲಿ! ಇವರೆಲ್ಲ, ನನ್ನನ್ನು ಮನಸ್ಸಿಗೆ ಬಂದಂತೆ test ಮಾಡಿ, test ಮಾಡಿಸಿ ವರದಿ ತರಿಸಿ ನನ್ನ ಜೇಬು ಖಾಲಿ ಮಾಡಿದರೇ ಹೊರತು ನಿದ್ರೆ ಬರುವಂತೆ ಮಾಡಲಿಲ್ಲ. ನಾನೋ ನಿದ್ರೆ ಬಂದರೆ ಸಾಕೆಂದು ಕೋಲೆ ಬಸವನ ಹಾಗೆ ಎಲ್ಲರ ಚಿಕಿತ್ಸೆ-ಪರೀಕ್ಷೆಗಳಿಗೂ ತಲೆ ಒಡ್ಡಿದೆ. ಒಬ್ಬಬ್ಬರು ಹೇಳಿದಂತೆ ಮಾಡುತ್ತಾ ಹೋದೆ.

ನಿದ್ರೆ ಬರಲು ನಾನು ಮಾಡಿಸಿಕೊಂಡ ಚಿಕಿತ್ಸೆಗಳಿಗೆ ತುದಿ-ಬುಡ ಇಲ್ಲ. ಅಲೋಪತಿಯವರ ಸಲಹೆಯಂತೆ ಬಣ್ಣಬಣ್ಣದ ಮಾತ್ರೆ ನುಂಗಿದೆ, ಟಾನಿಕ್ಕು ಹೀರಿದೆ. ಇಂಜೆಕ್ಷನ್ ಚುಚ್ಚಿಸಿಕೊಂಡೆ. ನಿದ್ರಾದೇವಿ ಹತ್ತಿರ ಸುಳಿಯಲಿಲ್ಲ. ಅಳಲೆಕಾಯಿ ಪಂಡಿತರು ಕೊಟ್ಟ ಲೇಹ್ಯ ನುಂಗಿದೆ. ಸೊಟ್ಟ ಮೋರೆ ಮಾಡಿ ಕಹಿಕಷಾಯ ಕುಡಿದೆ, ರಸಾಯನ ನೆಕ್ಕಿದೆ, ನುಂಗಿ, ನೆಕ್ಕಿ, ಕುಡಿದು ಬಾಯಿ ರುಚಿ ಹೋಯಿತೇ ಹೊರತು ನಿದ್ದೆ ನಾಪತ್ತೆಯಾಯಿತು. ಯುನಾನಿ ಹಕೀಮರು ಕೊಟ್ಟ ಬಿಳಿ ಪುಡಿ ನುಂಗಿದ್ದೇ ನುಂಗಿದ್ದು. ಹೋಮಿಯೋಪತಿಯವರು ದಯಪಾಲಿಸಿದ ಬಿಳಿಬಣ್ಣದ ಮಿನಿ ಗುಳಿಗೆಗಳನ್ನು ಗಂಟಲೊಳಗೆ ಇಳಿಬಿಟ್ಟೆ. ಪ್ರಯೋಜನ ಮಾತ್ರ ಸೊನ್ನೆ, ಅಡ್ಡಪರಿಣಾಮಗಳಿಂದ ತತ್ತರಿಸಿ ಹೋದೆ. ಪ್ರಕೃತಿ ಚಿಕಿತ್ಸಾ ತಜ್ಞರು ಮಾಡಿಸಿದಂತೆ ರಾತ್ರಿ ಮಲಗುವ ಮುಂಚೆ ಬಿಸಿನೀರು ತೊಟ್ಟಿಯಲ್ಲಿ ಕಾಲಿಟ್ಟು ಕುಳಿತೆ. ತಲೆ ಮೇಲೆ ಒದ್ದೆ ಬಟ್ಟೆ ಹಾಕಿಸಿಕೊಂಡೆ, ಕಣ್ಣಿಗೆ ತಂಪು ಪಟ್ಟಿ ಕಟ್ಟಿಸಿಕೊಂಡೆ. ಊಹುಂ! ನಿದ್ದೆ ನನ್ನಿಂದ ಮಾರುದ್ದ ದೂರ ಹಾರಿತು. ಇವೆಲ್ಲದರಿಂದ ವಾಕರಿಕೆ ಬಂತು, ತೂಕಡಿಕೆ ಬರಲಿಲ್ಲ. ಕೊನೆಗೆ ಯೋಗತಜ್ಞರಿಂದ ಕೆಲವು ಆಸನಗಳನ್ನು ಕಲಿತೆ. ಪ್ರಾರ್ಥನೆ, ಧ್ಯಾನ, ಪ್ರಾಣಾಯಾಮಕ್ಕೆ ಶುರು ಹಚ್ಚಿದೆ. ರಾತ್ರಿ ಮಲಗುವ ಮುಂಚೆ, ಓಂಕಾರ, ಝೇಂಕಾರ, ಹೂಂಕಾರ ಮಾಡತೊಡಗಿದೆ. ರಾತ್ರಿಯ ನಿಶ್ಶಬ್ದ ವಾತಾವರಣ ನನ್ನಿಂದ ಹಾಳಾಗುತ್ತಿದೆಯೆಂದು ನೆರೆ-ಹೊರೆಯವರು ಗೊಣಗಿದರು, ಕೆಲವರಂತೂ ಹಿಡಿಶಾಪ ಹಾಕಿದರು, ಮತ್ತೆ ಕೆಲವರು ನನ್ನ ಬಗ್ಗೆ ಪರಿಹಾಸ್ಯ ಮಾಡಿದರು. ನಿದ್ರಾಸುಖಕ್ಕಾಗಿ ಇವೆಲ್ಲವನ್ನು ತಾಳ್ಮೆಗೆಡದೆ ಸಹಿಸಿಕೊಂಡೆ.

ದಿನೇ-ದಿನೇ ನಿದ್ರಾಹೀನತೆ ಹೆಚ್ಚುತ್ತಾ ಹೋಯಿತು. ಏನು ಮಾಡಬೇಕೆಂದೇ ತೋಚಲಿಲ್ಲ. ಮಾನಸಿಕ ರೋಗ ತಜ್ಞರನ್ನು ಕಂಡು ಅವರಲ್ಲಿ ಅಂಗಲಾಚಿಕೋ ಎಂದು ಒಳಮನಸ್ಸು ಪಿಸುಗುಟ್ಟಿತು. ಒಂದು ಮಜಬೂತಾದ ಆಸ್ಪತ್ರೆಗೆ ಹೋದೆ. ತಜ್ಞರನ್ನು ಕಂಡು ಕೈಮುಗಿದು ನನ್ನ ವ್ಯಥೆಯನ್ನೆಲ್ಲಾ ಅವರ ಮುಂದೆ ನಿವೇದಿಸಿಕೊಂಡೆ. ಅವರ ತುದಿ-ಬುಡ ಕಾಣದ ಪ್ರಶ್ನೆಗಳಿಗೆಲ್ಲ ಎಗ್ಗಿಲ್ಲದೆ ಉತ್ತರಿಸುತ್ತಾ ಹೋದೆ. ''ನಿಮ್ಮ ಮನಸ್ಸು ಚಲೋ ಅದೆ; ನಿಮಗ್ಯಾಕೆ ಚಿಕಿತ್ಸೆ?'' ಎಂದು ಸವಾಲೆಸೆದರು. ನಿದ್ದೆ ಬರುವಂತೆ ಏನಾದರೂ ಮಾಡಿ ಎಂದು ಮತ್ತೊಮ್ಮೆ ದಮ್ಮಯ್ಯಗುಡ್ಡೆ ಹಾಕಿದೆ. ನನ್ನ ಪುರಾಣಶ್ರವಣ ಕೇಳಿ ಅವರ ಮನಸ್ಸು

ಹಿಮಾಲಯದ ಮಂಜಿನಂತೆ ಕರಗಿತು. ಒಂದು ದಿನವೂ ನಿಲ್ಲಿಸದಂತೆ ದಿನಕ್ಕೆ 2 ಮಾತ್ರೆಗಳಂತೆ ಹತ್ತು ದಿನ ಮಾತ್ರೆ ನುಂಗಿ, 11ನೆಯ ದಿನ ಪರಿಣಾಮವೇನಾಯಿತೆಂಬುದನ್ನು ಖುದ್ದಾಗಿ ಬಂದು ತಿಳಿಸಿ ಎಂದು ಸುಗ್ರೀವಾಜ್ಞೆ ಮಾಡಿದರು. ನನಗೊ ಖುಷಿಯೋ ಖುಷಿ. ಸ್ವರ್ಗಕ್ಕೆ ಮೂರೇ ಗೇಣು ಎಂಬಂತಾಯಿತು. ಈದಿನ ಪಟ್ಟಾಗಿ ನಿದ್ದೆ ಹೊಡೆದೇ ತೀರುವೆ ಎಂದು ಗಾಳಿಗೋಪುರ ಕಟ್ಟುತ್ತ ಮಾತ್ರೆ ಕೊಂಡು ತಿಂದೆ. ಮಾರನೇ ದಿನ ಬೆಳಿಗ್ಗೆ ರಾತ್ರಿ 2 ಮಾತ್ರೆ ನುಂಗಿದೆ. ಪರಿಣಾಮ ಏನಾಯ್ತು ಗೊತ್ತೆ? ಬೆಳಗಿನ ಜಾವಕ್ಕೆ ಬರುತ್ತಿದ್ದ ಚೂರು-ಪಾರು ನಿದ್ದೆಯೂ ನಿಂತೇ ಹೋಯಿತು. ಮತ್ತೆರಡು ದಿನಗಳೂ ಡಿಟೋ ಪರಿಣಾಮ. ಮೈಸೂರು ಮಲ್ಲಿಗೆ ಕವಿ ಕೆ.ಎಸ್. ನರಸಿಂಹಸ್ವಾಮಿ ಅವರು ಬರೆದಂತೆ ''ಕಣ್ಣನು ಕಡಿದರೂ ನಿದ್ದೆಯು ಬಾರದು..'' ಎಂಬಂತಾಯಿತು ನನ್ನ ಫಜೀತಿ. ಮಾನಸಿಕ ರೋಗ ತಜ್ಞರ ಹತ್ತಿರ ಮತ್ತೊಮ್ಮೆ ಹೋಗಿ ಹಾಜರಿ ಹಾಕಿ ಅಡ್ಡ ಬಿದ್ದೆ. ನನ್ನ ಕರುಣಾಜನಕ ಕತೆ ಕೇಳಿ ಬುದ್ಧನಂತೆ ಅವರ ಮನಸ್ಸು ಕರಗಿ ನೀರಾಯಿತು. ಹಳೆಯ ಮಾತ್ರೆಯ ಜೊತೆ ಮತ್ತೊಂದು ಹೊಸ ಮಾತ್ರೆ ಸೇವಿಸಲು ಅನುಗ್ರಹಿಸಿದರು. ಇದನ್ನು ಕೇಳಿ ನನಗೆ ಚಳಿ-ಜ್ವರ ಬಂದಂತಾಯಿತು. ಮಾತ್ರೆಯನ್ನೇನೋ ಕಾಸು ತೆತ್ತು ತಂದೆ. ರಾತ್ರಿ ನುಂಗಲು ಹೋದಾಗ ಮನಸ್ಸು-ಬಾಯಿ ಎರಡೂ ಒಟ್ಟಿಗೇ ''ಬೇಡ-ಬೇಡ'' ಎಂದು ಸೈರನ್ ಬಾರಿಸಿದವು. ರಾತ್ರಿಯೆಲ್ಲಾ ಹಾಸಿಗೆಯಲ್ಲಿ ಹೊರಳಾಡಿದ್ದೇ ಬಂತು. ಬೆಳಗಾದಾಗ ತಲೆನೋವು, ಕಣ್ಣು ಉರಿ, ಉತ್ಸಾಹ ಶೂನ್ಯತೆ.


ನಿದ್ದೆ ನನ್ನೊಂದಿಗೆ ಯುದ್ಧಕ್ಕೆ ಸಜ್ಜಾಯಿತು. ನನ್ನ ಬುರುಡೆಯಲ್ಲಿ ಚಿತ್ರ-ವಿಚಿತ್ರ ಯೋಜನೆಗಳು 'ಟೆಂಟ್' ಹೂಡಿದವು. ಸಮಸ್ಯೆ ಎದುರಾದಾಗ ಗಾಂಧೀಜಿಯವರಿಗೆ ಅಂತರಾತ್ಮನ ವಾಣಿ ಪರಿಹಾರ ಸೂಚಿಸುತ್ತಿತ್ತಂತೆ. ನಾನೂ ನನ್ನ ಅಂತರಾತ್ಮನ ಕದ ತಟ್ಟಿದೆ, ಸ್ವಿಚ್ ಒತ್ತಿದೆ. ''ಮೂರ್ಖ! ಇಷ್ಟೂ ತಿಳಿಯುವುದಿಲ್ಲವೇ? ಮನೆಮದ್ದು ಮಾಡು'' ಎಂಬ ಕೀರಲು ಧ್ವನಿ ಒಳಗಿನಿಂದ ಕೇಳಿ ಬಂತು, ನಿಜ ಹೇಳಲೆ! ನನಗಂತೂ ಪರಮಾನ್ನ ಉಂಡಷ್ಟು ಪರಮಾನಂದವಾಯಿತು. ಇದನ್ನೂ ಒಂದು ದಂ ನೋಡೇ ಬಿಡೋಣ ಎಂದು ನಿರ್ಧರಿಸಿದೆ. ಬಾಲ್ಯದಲ್ಲಿ ನಿದ್ದೆ ಮಾಡದಿದ್ದಾಗ ನಮ್ಮಮ್ಮ ನಮ್ಮಜ್ಜ ಮೈ-ಕೈ ತಟ್ಟಿ, ತಲೆ ನೇವರಿಸಿ ಜೋಗಳ ಹಾಡಿ ಮಲಗಿಸುತ್ತಿದ್ದುದು ನೆನಪಾಯಿತು. ಈಗೆಲ್ಲಿ ಆ ಅಮ್ಮ ಅಜ್ಜಿ? ಅವರಿಬ್ಬರೂ ಭೂಲೋಕದಿಂದ ಟಿಕೆಟ್ ಪಡೆದು ಸ್ವರ್ಗದಲ್ಲಿ ಹಾಯಾಗಿದ್ದಾರೆ. ಅವರನ್ನೂ ಎಮರ್ಜೆನ್ಸಿ ಬಿದ್ದಾಗ ಅಲ್ಲಿಂದ ಭೂಲೋಕಕ್ಕೆ ಕರೆಸಿಕೊಳ್ಳುವಷ್ಟು ವಿಜ್ಞಾನದಲ್ಲಿ ಇನ್ನೂ ಸಂಶೋಧನೆ ಆಗಿಲ್ಲ, ಏನು ಮಾಡಲಿ? ಎಂದು ಕೈ-ಮೈ ತುರಿಸಿಕೊಂಡೆ. ಕಣ್ಣುಮುಚ್ಚಿ ಕುಳಿತು deep meditation – ಮಾಡಿದೆ ಆರ್ಕಿಮಿಡೀಸನಿಗಾದ ಹಾಗೆ ಇದ್ದಕ್ಕಿದ್ದಂತೆ ಒಂದು ಐಡಿಯಾ ಫ್ಲಾಷ್ ಆಯಿತು. ಹೇಳಿ-ಕೇಳಿ ಈಗ ಕ್ಯಾಸೆಟ್ ಭರಾಟೆ

ಯುಗ. ಕೂಡಲೆ ಪೇಟೆ ಗಲ್ಲಿಗಳಲೆಲ್ಲಾ ಕಂಡಬಟ್ಟೆ ಅಲೆದು ಜೋಗುಳದ ಕ್ಯಾಸೆಟ್ ತಂದೆ. ರಾತ್ರಿ ಮಲಗುವ ಮುಂಚೆ ಹಾಕಿದರೆ ಕರ್ಕಶಧ್ವನಿ ಕೇಳಿ ಬಂತು. ಅದನ್ನು ಕೇಳುತ್ತಿದ್ದರೆ ಬರುವ ಚೂರುಪಾರು ನಿದ್ದೆಯೂ ನಾಪತ್ತೆ ಆದೀತೆಂದು ಅಂಜಿ ಟೇಪ್‌ರೆಕಾರ್ಡ್ ಬಂದ್ ಮಾಡಿ ದಾವಣಗೆರೆಯ ಎರಡು ಕಂಬಳಿ ಹೊದ್ದು ಮಲಗಿದೆ. ನಿದ್ದೆಗೆ ಬದಲು ಮೈ ಬೆವರಿತು ಅಷ್ಟೆ. ನಿದ್ದೆ ಸುಳಿವಿಲ್ಲ. ಮತ್ತೊಂದು ಪ್ರಯೋಗ ಮಾಡಿದೆ. ಮಲಗುತ್ತಿದ್ದ ಕೋಣೆ ಬದಲಾಯಿತು ಪಕ್ಕದ ಕೋಣೆಯಲ್ಲಿ ಮಲಗಿದೆ. ಹೊಸ ಹಾಸಿಗೆ, ದಿಂಬು, ಹೊದಿಕೆ ಕೊಂಡು ತಂದೆ. ಪರಿಣಾಮ ಮಾತ್ರ ಸೊನ್ನೆ. ಯಾರೋ ಹೇಳಿದರು. ಬೇರೆ ಊರಿಗೆ ಹೋಗಿ, ಬಂಧುಗಳ ಮನೆಯಲ್ಲಿ ನಾಲ್ಕು ದಿನ ಇದ್ದು ಬನ್ನಿ ಎಂದು. ಅವರಿತ್ತ ಪುಗಸಟ್ಟೆ ಸಲಹೆಯನ್ನು ಒಪ್ಪಿದೆ. ಬೆಂಗಳೂರಿನಲ್ಲಿ ಶಬ್ದಮಾಲಿನ್ಯವಿರದ ಬಂಧುಗಳೊಬ್ಬರ ಮನೆಗೆ ಹೋಗಿ 6 ದಿನ ಟೆಂಟ್ ಹೂಡಿದೆ. ಹೀಗೆ ನಾನೇ ಸಂಶೋಧಿಸಿದ ತಂತ್ರ ಉಪಾಯಗಳು ಎಷ್ಟೆಂದು ಹೇಳಲಿ! ಏನೇನು ಮಾಡಿದರೂ ನಿದ್ರಾದೇವಿ ನನ್ನನ್ನು ಕೆಂಗಣ್ಣಿನಿಂದಲೇ ನೋಡುತ್ತಿದ್ದಳು.

ಮರುದಿನ ನಮ್ಮಜ್ಜ ಮಾಡುತ್ತಿದ್ದಂತೆ ಬಿಸಿ-ಬಿಸಿ ಗಸಗಸೆ ಪಾಯಸ ಮಾಡಿ ಗಮ್ಮತ್ತಾಗಿ ಗಟಗಟಿಸಿ ಗುಟುಕರಿಸಿ ಹಾಸಿಗೆ ಮೇಲೆ ಬಿದ್ದೆ. Overdose ಆಗಿ ನಿದ್ದೆಗೆ ಬದಲಾಗಿ ಹೊಟ್ಟೆಯಿಂದ ಗುಡುಗುಡು ಶಬ್ದ ಬರತೊಡಗಿತು. ಇದು ಒಳ್ಳೆ ಪೀಕಲಾಟಕ್ಕಿಟ್ಟುಕೊಂಡಿತು. ಎದ್ದು ಮನೆಯೊಳಗೆ ಕಾಲು ಸುಟ್ಟುಕೊಂಡ ಬೆಕ್ಕಿನಂತೆ ಅತ್ತಿಂದಿತ್ತ ಸುತ್ತಾಡಿದೆ. ಮುದ್ದೆ ನುಂಗಿ ಮಲಗಿದರೆ ಗಡದ್ದಾಗಿ ನಿದ್ದೆ ಬರುತ್ತದೆಂದು ಯಾರೋ ಎಂದೋ ಹೇಳಿದ್ದ ಮಾತು ನೆನಪಾಯಿತು. ಅದನ್ನು ಮೂರು ದಿನ ಮಾಡಿದೆ. ಅಜೀರ್ಣವಾಯಿತು ಅಷ್ಟೆ. ಪುಸ್ತಕ ಓದುತ್ತಿದ್ದರೆ ನಿದ್ದೆ ಬರಬಹುದೆಂದು ಯೋಚಿಸಿ ಪ್ರತಿದಿನ ರಾತ್ರಿ ದಪ್ಪ ಪುಸ್ತಕ ಹಿಡಿದು ಪುಟ ತಿರುವಿ ಹಾಕತೊಡಗಿದೆ. ರೆಪ್ಪೆ ಬಡಿದುಕೊಳ್ಳುತ್ತಿತ್ತು. ದೊಪ್ಪನೆ ಹಾಸಿಗೆ ಮೇಲೆ ಬಿದ್ದು ಎರಡು ಕೈಯಿಂದಲೂ ಕಣ್ಣು ಮುಚ್ಚಿ ನಿದ್ರೆ ತಂದುಕೊಳ್ಳಲು ಶತಪ್ರಯತ್ನ ಮಾಡತೊಡಗಿದೆ. ಜಪ್ಪಯ್ಯ ಎಂದರೂ ನಿದ್ದೆ ಹತ್ತುತ್ತಿರಲಿಲ್ಲ. ಒಮ್ಮೆಗೆ ನಿದ್ದೆ ಮೇಲೆ ನೂರು ಡಿಗ್ರಿ ಸಿಟ್ಟು ಬಂತು. ನಿದ್ದೆಗೆ ನಾಲ್ಕು ಗುದ್ದು ಕೊಡೋಣವೆಂದರೆ ಹಾಳು ಶನಿ ಕಣ್ಣಿಗೆ ಕಾಣಿಸದು. ದಿಂಬನ್ನು ಎತ್ತಿ ಒಗೆದೆ, ಹಾಸಿಗೆ ಸುತ್ತಿ ಬಿಸಾಡಿದೆ. ನಿದ್ದೆಯೊಂದಿಗಿನ ನನ್ನ ಹಾರಾಟ-ಹೋರಾಟಕ್ಕೆ ಕೊನೆ ಇಲ್ಲವೆ? ಎಂದು ಕುಂಭಕರ್ಣನಲ್ಲಿ ಮೊರೆಯಿಟ್ಟೆ. ಆ ಮಹಾಪುರುಷನಿಗೆ ನನ್ನ ಆರ್ತಧ್ವನಿ ಎಲ್ಲಿ ಕೇಳಿಸೀತು? ಆತನೋ ಗಾಢನಿದ್ದೆಯಲ್ಲಿದ್ದ. ಕೊನೆಗೆ ಒಂದು ನಿರ್ಧಾರಕ್ಕೆ ಬಂದೆ. ಇನ್ನು ಯಾವ ಚಿಕಿತ್ಸೆ, ಉಪಚಾರ, ಮನೆಮದ್ದುಗಳಿಂದ ಏನೂ ಪ್ರಯೋಜನವಿಲ್ಲ. ಸಮಯ ಹಾಳು, ಜೇಬು ಖಾಲಿ. ನಿದ್ರಾಧಿದೇವತೆ ಕುಂಭಕರ್ಣನನ್ನು ಕುರಿತು ಉಗ್ರ ತಪಸ್ಸು ಮಾಡಿದರೆ ಅವನ ಅನುಗ್ರಹದಿಂದ ನಿದ್ದೆ ಖಂಡಿತ ಬಂದೇ ಬರುತ್ತದೆ. ಈಗ ಕೆಲವು

ದಿನಗಳಿಂದ ನಿದ್ರಾಧಿದೇವತೆಯಾದ ಕುಂಭಕರ್ಣನನ್ನು ಕುರಿತು ತಪೋಮಗ್ನನಾಗಿದ್ದೇನೆ. ಕರುಣಾಳು ಆತನ ದಯೆಯಿಂದ, ಮಲೆನಾಡಿನ ಮಳೆಯಂತೆ ಯಾವಾಗಲೂ ತೂಕಡಿಕೆ, ನಿದ್ದೆಯೋ ನಿದ್ದೆ. ಈ ಕೆಲಸವನ್ನು ಮೊದಲೇ ಮಾಡಿದ್ದರೆ ಎಷ್ಟು ಚೆನ್ನಾಗಿತ್ತು? ಎಂದು ನನ್ನ ಟ್ಯೂಬ್‌ಲೈಟ್ ಬುದ್ಧಿ ಈಗ ಹೇಳುತ್ತಿದೆ. ''ವಿದ್ಯಾವಿಹೀನಃ ಪಶುಃ'' ಎಂದು ಸುಭಾಷಿತಕಾರನೊಬ್ಬ ಹೇಳಿದ್ದಾನಂತೆ. ನನ್ನಂತೆ ನಿದ್ರೆ ಇಲ್ಲದೆ ಅವನು ಒದ್ದಾಡಿದ್ದಿದ್ದರೆ ''ನಿದ್ರಾವಿಹೀನಃ ಪಶುಃ'' ಎಂದೇ ಸುಭಾಷಿತ ಗೀಚುತ್ತಿದ್ದ.

ನನ್ನೀ ನಿದ್ದೆ ಪುರಾಣ ಕೇಳಿ ನಿಮಗೆ ನಿದ್ದೆ ಬಂದರೆ ನನ್ನ ಈ ಪುರಾಣ ಸಾರ್ಥಕ. ನನಗೂ ಇದನ್ನು ಬರೆಯುವ ವೇಳೆಗೆ ರೆಪ್ಪೆ ಬಡಕೊಳ್ಳಹತ್ತಿದೆ, ತಲೆ ದಿಂಬು ಹುಡುಕುತ್ತಿದೆ. ''ವಿಠ್ಠನ ಭಟ್ಟರ ಪುರಾಣ ಬಿಟ್ಟಲ್ಲಿಗೆ ಮುಕ್ತಾಯ'' ಅನ್ನುವಂತೆ ನನ್ನೀ ನಿದ್ದೆ ಪುರಾಣಕ್ಕೆ ಮಂಗಳ ಹಾಡುತ್ತೇನೆ. ಈ ಪುಣ್ಯ ಪುರಾಣವನ್ನು ಶ್ರದ್ಧಾಭಕ್ತಿಯಿಂದ ಆಲಿಸಿದವರೆಲ್ಲರಿಗೂ ನೆನಸಿಕೊಂಡ ಕೂಡಲೇ ಗಾಢನಿದ್ರಾ ಸುಖ ಲಭಿಸಲಿ ಎಂದು ನಿದ್ದೆಗಣ್ಣಿನಿಂದಲೇ ಹಾರೈಸುತ್ತೇನೆ. ನಿದ್ರಾಹೀನ ಸ್ಥಿತಿ ನನ್ನ ''ಶತ್ರುವಿಗೂ ಕೊಡಬೇಡ'' ಎಂದು ಸನ್ಮಾನ್ಯ ಕುಂಭಕರ್ಣನಲ್ಲಿ ನನ್ನ ಪ್ರಾರ್ಥನೆ.



ತಲೆನೋವು ತರುವವರು

– ನೀರಗುಂದ ಕೇಶವಮೂರ್ತಿ ರಾವ್

ಎಂದಿನಂತೆ ಬೆಳಕು ಹರಿಯುವ ಮೊದಲೇ ಬುರುಡೆ ಬಾಜೀರಾಯರ ಆಗಮನ. ಕುರ್ಚಿಯ ಮೇಲೆ ಕುಕ್ಕರಿಸುವುದೇ ತಡ ಕೈಯಲ್ಲಿಯ ಕಾಫಿ ಬಟ್ಟಲನ್ನು ಕುಕ್ಕಿ ಕಣ್ಮರೆಯಾದ ಮಡದಿಯ ಮನಸೇನೆಂಬುದು ನನಗೆ ತಿಳಿದದ್ದೆ.

ಬಾಜೀರಾಯರು ಬಂದರೆಂದರೆ ತಲೆ ಚಿಟ್ಟು ಹಿಡಿಸುವ ಗಿರಾಕಿಯೆಂದೇ ನನ್ನವಳ ಅಂಬೋಣ. ಹೆಸರೇ ಇದೆ ಬುರುಡೆ ಬಾಜೀರಾಯ ಅಂತ! ಮಾತಿಗೆ ಪ್ರಾರಂಭಿಸಿದರೆಂದರೆ ಮುಗಿಯುವ ಸೂಚನೆಯೇ ಕಂಡು ಬರುವುದಿಲ್ಲ. ಮತ್ತೊಮ್ಮೆ ಮಡದಿ ಕಾಫಿ ಲೋಟದೊಂದಿಗೆ 'ಅನಾಸಿನ್' ಮಾತ್ರೆಯನ್ನು ತಂದಾಗಲೇ ''ಬರ್ತೀನಪ್ಪ ಹೊತ್ತಾಯ್ತು'' ಎಂದು ಅರ್ಧ ಗಂಟೆ ಕೊರೆದು ಕಳಚಿಕೊಳ್ಳುತ್ತಿದ್ದರು.

ಇಂತಹ ತಲೆನೋವು ತರುವ, ಬೈರಿಗೆ, ಬ್ಲೇಡು ಹಾಕುವ ಆಸಾಮಿಗಳಿಗೆ ಕೊರತೆ ಇಲ್ಲ. ಸ್ವಲ್ಪ ನಿಮ್ಮ ಕಿವಿ ಎಚ್ಚರ ತಪ್ಪಿದರೆ ಸಾಕು ತಮಗೆ ತಾವೇ ಮಾತಿಗೆ ಪ್ರಾರಂಭಿಸಿ ಬಿಡುತ್ತಾರೆ ಈ ತಲೆ ಚಿಟ್ಟುಗಾರರು!

'ಹೀಗಂತಾನೇಂತನ್ಬೇಡಿಂತ' ಮಾತಿಗೆ ಶ್ರೀಕಾರ ಹಾಕಿ ಎಷ್ಟಿಷ್ಟೂ ಎಡಬಿಡದೆ ಸೊಗಸಾಗಿ ಕೊರೆದರೂ ಕೊನೆಗೆ ಅವನು ಹೊರಟುಹೋದ ಮೇಲೆ ಹೇಳಿದ್ದೇನೆಂದು ಗಂಟೆ ಗಟ್ಟಲೆ ಯೋಚಿಸಿ ತಲೆ ಕೆರೆದುಕೊಂಡರೂ ಅರ್ಥವಾಗುವುದಿಲ್ಲ. ಬಸ್ನಲ್ಲಿ ಹೋಗ್ತಾ ಇರ್ಬೇಕಾದ್ರೆ ಆಕಸ್ಮಿಕವಾಗಿ ಭೇಟಿಯಾಗುವ ತಲೆ ತಿನ್ನುವ ಆಸಾಮಿಯ ಕೈಗೆ ಸಿಕ್ಕಿ ಬಿದ್ದಾಗ ಮಾತಿಗೆ ಮಾತು ಪ್ರಾರಂಭವಾಗುತ್ತದೆ. ನಿಮ್ಮ ಕಿವಿ ಮಾತ್ರ ಅವರಿಗೆ ಬೇಕು. ''ಹತ್ತೊಂಬತ್ನೂರ... ರಿಂದ ನಿವೃತ್ತಿಯ ನಂತರದ ವರೆಗೂ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತ ರಬ್ಬರಿನಂತೆ ಎಳೆದೆಳೆದು ಹಿಗ್ಗಿಸುತ್ತ ತಮ್ಮ ಸ್ಟಾಪ್ ಬಂದ ಕೂಡಲೇ ಇದುವರೆಗೂ ಕಿವಿಗೊಟ್ಟು ನಿಮ್ಮನ್ನು ಮರೆತು (ಅಥವಾ ನೀವು ನಿದ್ರಾಧೀನರಾಗಿದ್ದರೆ) ಧುಮುಕಿ ಮರೆಯಾಗುತ್ತಾರೆ.

ಮನೆ ಬಾಗಿಲಿಗೆ ಬಂದು ತಲೆ ತಿನ್ನುವ ಮಾರಾಟಗಾರರ ಮಾತಿನ ವರಸೆಯೇ ಬೇರೆ! ತಮ್ಮ ಮಾತಿನ ಮೋಡಿಯಿಂದ ತಾವು ತಂದ ನಮಗೆ ಉಪಯೋಗಕ್ಕೆ ಬಾರದ ವಸ್ತುಗಳನ್ನು ಹೇಗಾದರೂ ಮಾಡಿ ನಮ್ಮ ಕೊರಳಿಗೆ ಕಟ್ಟಲು ತಲೆ ಕೊರೆಯಲು ಪ್ರಾರಂಭಿಸುತ್ತಾರೆ. ಈ ಕಂತು ಪಿತರ (ಇನ್‌ಸ್ಟಾಲ್‌ಮೆಂಟ್ ಸ್ಕೀಂ) ಈ ರೀತಿ ಬಾಧೆಗಳನ್ನು ಸಹಿಸಲಸಾಧ್ಯ! ಇವರ ಉಪನ್ಯಾಸ ಕೇಳುವುದಕ್ಕಿಂತ ಉಪವಾಸವಿರುವುದೇ ಮೇಲೆನಿಸುತ್ತದೆ.

ಇನ್ನು ಶಾಲಾ - ಕಾಲೇಜುಗಳು 'ಲೆಕ್ಚರ್' ಕೇಳಬೇಕಾದಾಗ ವಿದ್ಯಾರ್ಥಿಗಳ ಅನಿಸಿಕೆ 'ಲೆಕ್ಚರ್ ಕೇಳೊಕ್ಕಿಂತ ಪಿಕ್ಚರ್‌ಗೆ ಹೋಗೋದ್ಮೇಲು'' ಕೆಲವರು 'ಲೆಕ್ಚರ್' ಕೊಡ್ತಾರಾ ಇನ್ನು

ಕೆಲವರು 'ಲೆಕ್ಚರ್' ಬುಡ್ತಾರಂತೆ. ಅಂದ್ಮೇಲೆ ವಿದ್ಯಾರ್ಥಿಗಳ ಅನಿಸಿಕೆ ಸರಿಯಿರಬಹುದು.

ಸಭೆ ಸಮಾರಂಭಗಳಲ್ಲಿ ಮಾತನಾಡಿ ತಲೆ ತಿನ್ನುವ, ಕೊರೆಯುವವರಿಗೆ ಸಮಯದ ಪರಿವೇ ಇರುವುದಿಲ್ಲ. ಸ್ವಾಗತ ಭಾಷಣವಾಗಲಿ, ಅಧ್ಯಕ್ಷ ಭಾಷಣವಾಗಲಿ, ಮುಖ್ಯ ಭಾಷಣಕಾರರಾಗಿರಲಿ ಕೊನೆಗೆ ವಂದನಾರ್ಪಣೆ ಮಾಡುವವರಾಗಿರಲಿ ಮೈಕಿನ ಮುಂದು ನಿಂತು ಕೊರೆಯಲು ಸುರು ಮಾಡಿದರೆಂದರೆ (ಅನುಭವಿಸಿದವರಿಗೆ ಇದು ಚೆನ್ನಾಗಿ ಪರಿಚಯವಿರುತ್ತದೆ) ಕವಿ ದುಂಡಿರಾಜರ 'ಅಧ್ಯಕ್ಷ ಭಾಷಣ' ಹನಿಗವನ ನೆನಪಿಗೆ ಬರುತ್ತದೆ.

ಅದ್ಭುತವಾಗಿತ್ತು
ಅಧ್ಯಕ್ಷರ ಭಾಷಣ
ವಿಷಯ, ಶೈಲಿ, ಭಾಷೆ
ಎಲ್ಲವೂ ಚೆನ್ನ
ಆದರೂ ಅವರು
ನೋಡಬೇಕಾಗಿತ್ತು
ಒಮ್ಮೆಯಾದರೂ
ತಮ್ಮ ವಾಚನ್ನ!

ಚುನಾವಣಾ ಸಮಯದಲ್ಲಿ ರಾಜಕಾರಣಿಗಳು ಕೊರೆಯುವ ಭಾಷಣಗಳಿಗೆ ಆಳ ಅಗಲಗಳೇ ಇರುವುದಿಲ್ಲ. ಇನ್ನೇನು ಚುನಾವಣೆಗಳು ಸಮೀಪಿಸುತ್ತಿವೆ! ಇಂತಹ ಭಾಷಣಕಾರರನ್ನು ಕುರಿತು ಕನ್ನಡದ ಹಿರಿಯ ಪ್ರಬಂಧಕಾರರಾದ ಅ.ರಾ. ಮಿತ್ರರು ತಮ್ಮ 'ಛಂದೋಮಿತ್ರ' ಗ್ರಂಥದಲ್ಲಿ ಭಾಮಿನಿ ಷಟ್ಪದಿಯಲ್ಲಿ ಬರೆದ ಈ ಪದ್ಯವನ್ನು ಗಮನಿಸಿ


ಕೊರೆವ ಯಂತ್ರಕೆ ನೆಲದ ತಳದಲಿ
ಹರಿಯುವೆಣ್ಣೆಯು ಐದು ನಿಮಿಷಕೆ
ದೊರೆಯದಿದ್ದರೆ ಕೊರೆವುದನ್ನೇ ನಿಲಿಸಿ ನಡೆಯುವರು
ನೆರೆದ ಸಭಿಕರ ಕಿವಿಯ ತಳದಲಿ
ಕೊರೆವ ಭಾಷಣಕಾರ ಜನರಿಗೆ
ಬರದು ಏಕೋ ಯಂತ್ರ ಬುದ್ಧಿಯು ಏನು ಮಾಡುವುದು.

ಹೀಗೆ ತಲೆನೋವು ತರುವಂತೆ ಮಾತನಾಡುವ ಗೆಳೆಯ ನಿಮಗಿದ್ದಲ್ಲಿ ಆಕಸ್ಮಾತ್ತಾಗಿ ನೀವು ಅವನನ್ನು ಕಂಡಾಗ ಅವನಿಂದ ತಪ್ಪಿಸಿಕೊಳ್ಳುವ ಹುನ್ನಾರವನ್ನು ನಡೆಸಿಯೇ ತೀರುತ್ತೀರಿ.

ಕೆಲವು ಮಾತುಗಾರ ಮಲ್ಲಣ್ಣರು ಎಷ್ಟು ತಲೆ ತಿನ್ನುತ್ತಾರೆಂದರೆ ಇಡೀ ದಿನವನ್ನು ಚಿಟಿಕೆ ಹೊಡೆದಷ್ಟು ವೇಳೆಯಲ್ಲಿ ಕಳೆಯುವಂತೆ ಎಲ್ಲೆಲ್ಲಿಯದೋ ಸುದ್ದಿಗಳನ್ನು ತಂದು

ಕೇಳುವವರ ತಲೆಯಲ್ಲಿ ತುರುಕುತ್ತಾರೆ! ಇಂತಹವರ ಮುಂದೆ ನಿಮ್ಮದೇನಾದರೂ ತೋಡಿಕೊಳ್ಳುವ ಸಂದರ್ಭವಿದ್ದಲ್ಲಿ ಅದಕ್ಕೆ ಅವಕಾಶವೇ ಇರುವುದಿಲ್ಲ. ತನ್ನ ವಿಚಾರವಾಗಿಯೇ ತಲೆ ತಿನ್ನುತ್ತಾರೆ. ಒಮ್ಮೆ ಹೀಗಾಯ್ತು ಬಾಜೀರಾಯರಿಗೆ ಮುಖ್ಯವಾದ ಸಮಾಚಾರ ತಿಳಿಸಲು ಫೋನ್ ಮಾಡಿ ''ಬಾಜೀರಾಯರಿದ್ದಾರ?'' ಎಂದು ಕೇಳಿದೆ. ಆ ಕಡೆಯಿಂದ ''ಹೌದು ನಾನೇ ಬಾಗೂರಿನ ಬುರುಡೆ ಬಾಜೀರಾಯ! ಬಾಜೀರಾಯ ಎನ್ನುವವರು ಬೆಂಗಳೂರಿನ ಬಸವನಗುಡಿಯಲ್ಲಿ ಬಹಳಷ್ಟು ಮಂದಿ ಇದಾರೆ. ಅದ್ರಿಂದ ನಾನು ನನ್ನ ಹೆಸರನ್ನು ಬಾಗೂರಿನ ಬುರುಡೆ ಬಾಜೀರಾಯಾಂತ ಬದಲಾಯಿಸಿದ್ದೀನಿ. ಮೊನ್ನೆ ಏನಾಯ್ತು ಗೊತ್ತಾ ಯಾವ್ದೋ ಒಂದು ಸಮಾರಂಭ. ಬಾಜೀರಾಯರು ವೇದಿಕೆ ಮೇಲೆ ಬರ್ಬೇಕು ಅಂದಾಗ ಸಭೇಲಿದ್ದ ಇಪ್ಪತ್ತು ಮಂದಿಯಲ್ಲಿ ಹನ್ನೊಂದು ಮಂದಿ ಎದ್ದು ಬರೋದೆ! ಆಗ ಕಾರ್ಯದರ್ಶಿ ನನ್ನ ಕಡೆ ಕೈ ತೋರುಸ್ತಾ 'ಇವ್ರು' ನೀವಲ್ಲ ಎಂದಾಗ ನನಗೆ ಗುಂಡು ತಲೆ ಗೋವಿಂದನ್ನ ತಿರುಪತಿಯಲ್ಲಿ ಹುಡುಕಿದ ಅನುಭವವಾಯ್ತು.....'' ಎಂದು ಫೋನಿನಲ್ಲೇ ಕೊರೆಯಲು ಸುರು ಮಾಡಿದರು. ಈ ಸಮಯದಲ್ಲಿ ನಾನು ಅವರಿಗೆ ತಿಳಿಸಬೇಕಾದ ಮುಖ್ಯ ಸಮಾಚಾರ ತಿಳಿಸಲು ಸಾಧ್ಯವಾಗಲೇ ಇಲ್ಲ!

ಸದ್ಯ ಇನ್ನೇನು ಹೀಗೆ ತಲೆ ತಿಂತಿದಾನೆ ಅನ್ಬೇಡಿ. ದಯವಿಟ್ಟು ತಲೆನೋವು ತರುವವರಿಂದ ದೂರವಿದ್ದರೆ ಕ್ಷೇಮ ಅಂತೀರಾ? ಹೌದು.



ರಾ.ಶಿ. ಅವರ ಜೊತೆ

– ಓಂ ಪ್ರಕಾಶ್

ಮೆಡಿಕಲ್ ಕಾಲೇಜ್ ಬೆಂಗಳೂರಿನಲ್ಲಿ ಸ್ಥಾಪಿತವಾದ ದಿನಗಳು. ನೂರಾರು ಅಪ್ಲಿಕೇಶನ್‌ಗಳು ನಮ್ಮ ಮನೆಗೆ ಬಂದವು. ಅಪ್ಪ ಮೈಸೂರ್ ಮೆಡಿಕಲ್ ಎಜುಕೇಷನ್ ಸೊಸೈಟಿ ರೆಜಿಸ್ಟ್ರಾರ್ ಆಗಿದ್ದರು. ನಮಗೆಲ್ಲ ಸಂಭ್ರಮ ಅರ್ಜಿಗಳನ್ನೆಲ್ಲ ನಾವು ಜೋಡಿಸಿ, Master - List ಮಾಡುತ್ತಿದ್ದೆವು. ಒಬ್ಬ ಅಭ್ಯರ್ಥಿ ತನ್ನ ಫೋಟೋನ ಕಳಿಸಿದ್ದ. ಅದರಲ್ಲಿ ಸ್ಟೆಥೋಸ್ಕೋಪ್ ಹಾಕಿಕೊಂಡಿದ್ದ! ನಾನು ಅದನ್ನ ಅಪ್ಪನ ಗಮನಕ್ಕೆ ತಂದೆ. ಅವರು, ''ಅವನು ಡಾಕ್ಟರೇ ಇರಬಹುದು ಕಣೋ, ಇನ್ನೊಂದು ಸಲ ಎಲ್ಲ ಕಲಿಯೋಣ ಅಂತ ಅರ್ಜಿ ಹಾಕಿದಾನೆ!'' ಅಂದರು. "You must appreciate his optimism!' ಅಂತ ಸೇರಿಸಿದರು.

★★★

ನನಗೆ ಸುಮಾರು ನಾಲ್ಕು ವಯಸ್ಸಿರಬಹುದು. ಅಪ್ಪನ ಕಾರ್ ಹಾರ್ನ್ ಕೇಳಿದ ಕೂಡಲೇ ಓಡಿ ಹೋಗಿ, ಗೇಟ್ ತೆಗೆದು, ಅದನ್ನ ಹತ್ತಿ ನಿಲ್ಲುತ್ತಿದ್ದೆ. ಕಾರ್ ಬಂದ ಕೂಡಲೇ ಸೆಲ್ಯೂಟ್ ಮಾಡಿ, ಓಡಿ, ಅವರ Brown Bag ತೆಗೆದುಕೊಂಡು ಮನೆಯೊಳಗೆ ಇಡುತ್ತಿದ್ದೆ. ಅದರಲ್ಲಿದ್ದ ಸ್ಪಿರಿಟ್ ಬಾಟಲ್ ಬೀಳಿಸಿ ಬೈಸಿಕೊಂಡಿದ್ದೂ ಉಂಟು. ಪ್ರಾಯಶಃ ಯಾವುದೋ Sub conscious Desive ನನ್ನನ್ನೂ ವೈದ್ಯ ವೃತ್ತಿಗೆ ಎಳೆಯಿತು. ಈಗ ಅಪ್ಪ ಇಲ್ಲ, ಆದರೆ ಆ ಬ್ಯಾಗ್ ಇನ್ನೂ ನನ್ನ ಕಲೆಕ್ಷನ್‌ನಲ್ಲಿ ಭದ್ರವಾಗಿದೆ!

★★★

1940 ರಿಂದ 1960ನೆಯ ಇಸವಿ ತನಕ ರಾ.ಶಿ. ಸೈಂಟ್ ಮಾರ್ಥಾಸ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದರು. ಗುಡ್ ಶೆಪರ್ಡ್ ನನ್ಸ್ ಅವರೆಲ್ಲ ಸೇರಿ 1886 ರಿಂದ ಸತತವಾಗಿ ನಡೆದು ಬಂದಿರುವ ಈ ಆಸ್ಪತ್ರೇಲಿ ಕೆಲಸ ಮಾಡೋದು ನಮ್ಮ ಭಾಗ್ಯ ಕಣೋ! ಅವರಿಗಿರುವ ನೈಜ ಸೇವಾ ಮನೋಭಾವ ಇನ್ನೆಲ್ಲೂ ಕಂಡುಬಂದಿಲ್ಲ ಅಂತ ನನಗೆ ಮನದಟ್ಟುವಂತೆ ಹೇಳುತ್ತಿದ್ದರು. 1975 ರಲ್ಲಿ ನಾನು ಅಲ್ಲಿ ಕೆಲಸ ಮಾಡಲು ಶುರು ಮಾಡಿದಾಗ ಅವರಿಗೆ ಬಹಳ ಸಂತೋಷವಾಯಿತು. ಬಡವ, ಬಲ್ಲಿದ, ಜಾತಿ, ಮತ, ಭಾಷೆ ಇಂತಹ ಭೇದಗಳಿಲ್ಲದ, ಎಲ್ಲ ರೋಗಿಗಳನ್ನೂ ಸಮಾನ ಭಾವನೆ, ಪ್ರೇಮಗಳಿಂದ ನಿಷ್ಕಳಂಕ ವೈದ್ಯಕೀಯ ಸೇವೆ ಈ ಆಸ್ಪತ್ರೆಯ ಮಣ್ಣಿನ ಗುಣ.

★★★

ರಾ.ಶಿ. ಉಪ್ಪಿಟ್ಟು ತಿನ್ನುವುದನ್ನೆ ನೋಡುವುದೇ ಒಂದು pleasure. ನಂ ತರಹ ಗಬಗಬ ಅಂತ ತಿಂದು ಏಳ್ತಾ ಇರಲಿಲ್ಲ. ಮೊದಲು ತಟ್ಟೆ ಮಧ್ಯದಲ್ಲಿ ಒಂದು ಸಕಲ್ ಆಫ್ ತುಪ್ಪ. ಅದರ ಹೊರಗೆ ಉಪ್ಪಿನಕಾಯಿ ರಸದ ಹನಿಗಳ ವರ್ತುಲ ಇವೆರರ ಮೇಲೂ

ಹಗುರಾಗಿ ಉಪ್ಪಿನ ಕಣಗಳ ಪ್ರೋಕ್ಷಣೆ, ಇದೆಲ್ಲ ಮಾಡುವಾಗ ಉಪ್ಪಿಟ್ಟನ್ನೇ ಮರೆಯುತ್ತಾರೋ ಅಂತ ಕುತೂಹಲದಿಂದ ನೋಡುತ್ತಿದ್ದ ನಾನು! ಕೊನೆಗೆ ಉಪ್ಪಿಟ್ಟನ್ನು ನಿಧಾನವಾಗಿ ಕಲಸಿ ತಿನ್ನಲು ಆರಂಭ. ಅಲ್ಲ, ಹೊಟ್ಟೇಲಿ ಎಲ್ಲಾ ಮಿಕ್ಸಾಗೇ ಆಗುತ್ತಲ್ಲ ಅಂತ ನಾನು ಒಂದು ದಿನ ಕೇಳೇಬಿಟ್ಟೆ! ರಾ.ಶಿ. ಹೇಳಿದರು. ''ಅಲ್ಲ ಕಣೋ, ನಾವೇನಾದರೂ ತಿನ್ನುಕ್ಕೆ ಮುಂಚೆ ದೇಹದಲ್ಲಿ ಏನಾಗುತ್ತೆ?''

ನಾನು: 'ಹಸಿವು'

ರಾ.ಶಿ.: 'ಹಸಿವಿನ ಜೊತೆಗೇ ತಿನ್ನುವ ಪದಾರ್ಥದ ರುಚಿ, ವಾಸನೆ ಈ Anticipatious ಗಳ ಪ್ರಭಾವದಿಂದ ಸಲೈವ ಹಾಗೂ ಹೊಟ್ಟೇಲಿರೋ digestic enzyms ತಯಾರಾಗುತ್ತವೆ, ಅದಕ್ಕೇ ನಾನು ತಿನ್ನುವ ರೀತಿ ದೇಹಕ್ಕೆ ಒಳ್ಳೆಯದು!'' ನಾನು ಸುಮ್ಮನಾದೆ!

★★★




ತೆರಿಗೆ ಅಧಿಕಾರಿಗೆ....

- ಪ್ರಕಾಶ್

ನಾ ಬಡವನೆಂದೆನಲು ಅಂಜುತಿಹೆ ಹೇ ದೇವ
ತೆರಿಗೆಯಧಿಪತಿ ನೀನು ಎದುರಿಗಿಹಲು!
ನೀನರಿಯದಾ ಕಷ್ಟವನು ನನಗೆ ದಯಪಾಲಿಸಿಹೆ
ನಿನಗಲ್ಲದಾ ಚಿಂತೆ ನನಗಿರುವುದು;
ನನ್ನ ವೇತನದ ಗೊಡವೆಯೇ ನಿನಗಿಲ್ಲ
ನಿನ್ನ ಪಾಶದ ಭೀತಿ ನಮಗೆಂದಿಗು!
ನಿನ್ನಂತೆ ದರ್ಪದಿಂ ನಡೆವ ಸುಖ ನನಗಿಲ್ಲ
'ಭಯ'ವನರಿಯದ ನಿನ್ನಾತ್ಮಕೆಂದು ಬಂದೀತು
'ಕಾಪಾಡು ದೇವರೇ!' ಎಂದೊರಲುವಾ ಚಾನ್ಸು?
ಕರುಣೆಯಾ ಮಾರ್ದವತೆಯನರಿಯೆ ನೀನು!
ಇನ್ನಷ್ಟು ಸಂದಾಯ, ಮಗದಷ್ಟು ಕಂದಾಯ,
ನಿನ್ನ ಬಾಳಿನ ತುಂಬ 'ಬೇಕು!'
ಶಾಪ ಹಾಕುವದಿಂದ ನಿನಗಂತು ಉಳಿವಿಲ್ಲ
ನನಗಂತು ಚಲನುಗಳಿಂದ ಮೋಕ್ಷವಿಲ್ಲ!!

(ಕುವೆಂಪು ಅವರ ಕ್ಷಮೆ ಬೇಡಿ)



ಹೊಸಾ ನಿರ್ಣಯಗಳು....

- ಎಚ್. ಗೋಪಾಲಕೃಷ್ಣ

ನಿಮ್ಮ ಮನೆಗಳಲ್ಲಿ ಹೇಗೆ ಅಂತ ಖಂಡಿತ ನನಗೆ ತಿಳಿಯದು. ಆದರೆ ನನ್ನ ಮನೆಯಲ್ಲಿ, ಸಾರೀ, ಹೀಗೆ ಹೇಳಬಾರದು - ಮನೆ ಅಂದಮೇಲೆ ಅದು ನನ್ನ ಒಬ್ಬನದ್ದೇ ಆಗಿರಲು ಖಂಡಿತ ಸಾಧ್ಯವಿಲ್ಲದ್ದು - ನಮ್ಮ ಮನೆಯಲ್ಲಿ ಬೆಳಿಗ್ಗೆಯಿಂದ ಸರಿ ರಾತ್ರಿಯವರೆಗೆ ಒಂದು ರೀತಿಯ ಆಜ್ಞೆಗಳನ್ನು ಹೊರಡಿಸುತ್ತಾ ಅದನ್ನು ಜಾರಿ ಮಾಡದಿರುವವರ ಮೇಲೆ ಹರಿಹಾಯುತ್ತಾ ಇಡೀ ಪರಿಸರವನ್ನು ಮತ್ತು ಇಡೀ ಜಗತ್ತನ್ನು ಒಂದು ರೀತಿಯ ಕ್ಷೋಭೆಯಲ್ಲಿರಿಸಿರುವ ಪರಿಸರ ನಿರ್ಮಾಣವಾಗಿರುತ್ತದೆ. ''ಇರೋದು ಮೂರೂ ಮತ್ತೊಂದು ಕಾಲು ಜನ ನಿಮ್ಮ ಮನೇಲಿ ಅದು ಹೇಗಯ್ಯಾ ಕ್ಷೋಭೆ ಸಾಧ್ಯ'' ಅಂತ ನೀವು ಕೇಳ್ತೀರಿ ಅಂತ ನನಗೆ ಗೊತ್ತು. ಅದಕ್ಕೆ ನಿಮ್ಮನ್ನ ಒಂದೂವರೆ ನಿಮಿಷ ಮಾತ್ರಾ ನಮ್ಮ ಮನೆಯೊಳಗೆ ಬರಲು ಅನುಮತಿ ನೀಡುತ್ತೇನೆ. ಬನ್ನಿ ಒಂದೂವರೆ ನಿಮಿಷ ಮಾತ್ರಾ ನಮ್ಮ ಮನೆಯೊಳಗೆ ಬನ್ನಿ ಮತ್ತು ನಮ್ಮ ಪರಿಸರವನ್ನು ಅವಲೋಕಿಸುವಂಥಹವರಾಗಿ....

ಈಗ ಬೆಳಿಗ್ಗೆ ಏಳೂವರೆ ಹತ್ತಿರ ಸಮಯ. ನಿಮಗೆ ಅದೇನು ಉದಯರಾಗ ಕೇಳಿಸುತ್ತೆ? ''ಲೇ ಏಳೋ ಆಗಲೇ ಎಂಟಾಗುತ್ತಾ ಬಂತಲ್ಲೋ ಎದ್ದು ಜಿಮ್ನಾಸ್ಯಿಯಮ್ಗೆ ಹೋಗಬೇಡವೇನೋ? ನಿನಗೆ ಹೇಳಿ ಹೇಳೀ ನನಗೆ ಸಾಕಾಗಿಹೋಗುತ್ತದಲ್ಲೋ? ನಿನ್ನ ವಯಸ್ಸಿನ ಹುಡುಗರಿಗೆ ಅದೇನು ಚುರುಕಿರಬೇಕೋ? ನೀನು ನೋಡಿದರೆ ಯಾವಾಗಲೂ ಹಾಸಿಗೆಯಲ್ಲಿ ಬಿದ್ದಿರ್ತೀಯಲ್ಲೋ ಒಂದು ಸ್ವಲ್ಪನಾದರೂ ಚುರುಕಿಲ್ಲ ಅಂದರೆ ಮುಂದೆ ಅದ್ಹೇಗೆ ಜೀವನ ನಿಭಾಯಿಸ್ತೀಯೋ ಏಳೋ ಸೋಂಭೇರೀ, ನನ್ನ ಪಾಡಿಗೆ ನಾನು ಬಡಕೊಳ್ತಾನೇ ಇದೀನಿ ನಿನ್ನ ಪಾಡಿಗೆ ನೀನು ಹಾಗೇ ಹೆಬ್ಬಾವಿನ ರೀತೀ ಬಿದ್ದುಕೊಂಡೇ ಇದೀಯಲ್ಲಾ ನಾನೇನೂ ಮನುಷ್ಯರಿಗೆ ಹೇಳ್ತಾ ಇದೀನೋ ಮರದ ಕೋಡಿಗೋ...'' ಇದು ಮೊದಲನೇ ಸ್ಯಾಂಪಲ್ಲು.

ಇನ್ನು ಎರಡನೇ ಸ್ಯಾಂಪಲ್ಲಿಗೆ ಬನ್ನಿ. ''ಏನಮ್ಮಾ ನಿನ್ನ ಕೆಲಸ ನೀನು ಮಾಡಿಕೊಳ್ಳೊಕ್ಕೆ ಆಗುಲ್ಲವೇ? ನಿನ್ನ ಬಟ್ಟೆಗಿಟ್ಟೆ ಎಲ್ಲಾ ನೀನು ಸ್ನಾನಕ್ಕೆ ಹೋಗೋ ಮೊದಲೇ ತೆಗೆದು ಇಟ್ಟುಕೋಬೇಕು ಅಂತ ನಿನಗೆ ಗೊತ್ತೋ ಇಲ್ಲವೋ ದಿವಸಕ್ಕೆ ಸಾವಿರ ಸಲ ಹೇಳಿದರೂ ಹೀಗೇ ಮಾಡ್ತಾ ಇದ್ದರೆ ಹ್ಯಾಗೆ? ನೋಡಿದವರು ಅದೇನು ಅಂದ್ಕೋತಾರೆ? ಮನೇಲಿ ಹಾಳಾದೋಳು ಇವರಮ್ಮ ಇವಕ್ಕೆ ಅದೇನೂ ಹೇಳೇ ಕೊಟ್ಟಿಲ್ಲ ಅಂತ ಅಂದುಕೊಳ್ಳುಲ್ಲವೇ? ನಾನು ನೋಡಿದರೆ ಅಷ್ಟೊಂದು ಬಡಕೊಂಡೂ ಬಡಕೊಂಡೂ ನಿಮಗೆ ಸರಿಯಾದ ಬುದ್ಧಿ ಹೇಳಿಕೊಡೋದೂ ನೀವು ನೋಡಿದರೆ ಆ ಹಾಳದ್ದು ನಿಮ್ಮ ಅಪ್ಪನ ಥರಾ ಕೇರೇ ಮಾಡದೆ ಮೈ ತಿರುಗಿಸಿಕೊಂಡು ಹೋಗೋದೂ ಅಂದರೆ ಅದೇನು ಅರ್ಥಾ? ನಿಮ್ಮ ಅಪ್ಪ ಒಂದು ಥರಹಾ ನನ್ನನ್ನ ಘೋಳು ಹೊಯಿದುಕೊಂಡರೆ ನೀವು ಇನ್ನೊಂದು ಥರಹಾ ಗೋಳು ಹೊಯ್ಕೋತೀರಲ್ಲಾ? ನಾನೇನು ನನ್ನ ಒಳ್ಳೇದಕ್ಕೋ ನಿಮ್ಮ ಒಳ್ಳೇದಕ್ಕೋ ಹೀಗೆ ಹೇಳೋದು ಅಂತ ನಿಮಗೆ ತಿಳಿದುಕೊಳ್ಳೊ ಶಕ್ತಿ ಇಲ್ಲವೇ?'' ಇದು

ಎರಡನೇ ಸ್ಯಾಂಪಲ್ಲು. ಇನ್ನೂ ಒಂದೆರಡು ನಿಮಿಷ ಆಗಿಲ್ಲ ಅಂದರೆ ಬನ್ನಿ ಮೂರನೇ ಸ್ಯಾಂಪಲ್ಲನ್ನೂ ಸಹ ನೀವು ನೋಡಿ....

''ಮನೇಗೆ ಬಂದ ಕೂಡಲೇ ಆ ಹಾಳದ್ದು ಫ್ಯಾಕ್ಟರಿಯಿಂದ ಹಾಕ್ಕೊಂಡು ಬಂದಿರೋ ಷೂನ ಹಾಗೇ ಬಿಸಾಕೋದೂ? ಮನೇಲಿ ಚಪ್ಪಲಿ ಗೂಡು ಅಂತ ಯಾಕಿರೋದೂ? ನಿಮ್ಮ ಶನಿ ಯೂನಿಫಾರ್ಮನ್ನು ಅಲ್ಲೇ ಬಾಗಿಲ ಮೇಲೆ ನೇತು ಹಾಕಬೇಡಿ ಅಂತ ಎಷ್ಟು ಸಲ ನಿಮಗೆ ನಾನು ಬಡಕೊಳ್ಳಲಿ? ಮನೆಗೆ ಬಂದೋರೆಲ್ಲಾ ಈ ಹಾಳಾದೋಳು ಮನೇನ ಸರಿಯಾಗಿ ಇಟ್ಟುಕೊಂಡಿಲ್ಲ ಅಂತ ನನ್ನ ಮೇಲೇ ಶಾಪಾ ಹಾಕ್ತಾರ್ಯೇ ಹೊರ್ತು ನಿಮ್ಮ ಮೇಲೆ ಹಾಕ್ತಾರ್ಯೇ? ಬೆಳಗ್ಗಿಂದ ರಾತ್ರಿ ಬಿದ್ಕೊಳ್ಳೊ ಹೊತ್ತಿನವರೆಗೂ ನಿಮ್ಮ ಚಾಕರೀನೇ ಮಾಡೀ ಮಾಡೀ ನನಗೆ ಸಾಕಾಗಿ ಹೋಗುತ್ತೆ. ಇವಳು ಮನೇಗೋಸ್ಕರ ಹೀಗೆ ಒದ್ದಾಡ್ತಾಳೆ ಅಂತ ಯಾರ ಮನಸ್ಸಿಗೂ ಬರೋದೇ ಇಲ್ಲವೇ. ನಾನು ಅಂದರೆ ಮನೇಲಿ ನಿಮಗೆಲ್ಲಾ ಒಂದು ರೀತಿ ಕಸ ಆಗಿಬಿಟ್ಟಿದೀನೀ...'' ಇದು ಮೂರನೇ ಸ್ಯಾಂಪಲ್ಲು ಅಂತ ಇಟ್ಟುಕೊಳ್ಳಿ. ಇನ್ನೂ ಸ್ಯಾಂಪಲ್ಲುಗಳು ಬೇಕೇ? ''ಸಾಕು ನಮ್ಮ ಮನೇಲೂ ಇದೇ ಗೋಳುರೀ ನಿಮ್ಮದೇನೂ ಹೊಸದು ಅಂತ ಅನಿಸೋಲ್ಲಾ ಕಣ್ರೀ'' ಅಂದಿರಾ. ಈಗ ಅದಕ್ಕೇ ಬಂದೇರೀ. ''ನೀವು ಜೀವನದಲ್ಲಿ ಒಂದು ಅಪೂರ್ವವಾದಂಥಹಾ ಅವಕಾಶವನ್ನು ಇದೇ ಈಗ ಮಿಸ್ಸು ಮಾಡಿಕೊಂಡಿದೀರಾ ರೀ'' ಅಂತ ಹೇಳುಕ್ಕೆ ಬಂದೇರೀ... ''ಅದೇನಪ್ಪಾ ಅಂಥಾ ಅಪೂರ್ವವಾದದ್ದು ಅಂತ'' ನಿಮ್ಮ ಪ್ರಶ್ನೆ ಅಲ್ಲವೇನ್ರೀ? ಬನ್ನಿ ಮೊನ್ನೆ ಅದೇನಾಯಿತು ಅಂತ ನಿಮಗೆ ಹೇಳುವೆ....

ಸಾಹಿತ್ಯ ಸಮ್ಮೇಳನ ಅಂತ ಒಂದುವಾರ ರಜೆ ಹಾಕಿ ಊರು ಸುತ್ತಿಕೊಂಡು ಅಲ್ಲೆಲ್ಲಾ ಹೊತ್ತುಹೊತ್ತಿಗೆ ಊಟ ಉಪಹಾರ ತಿಂಡಿ ತೀರ್ಥಗಳೆಲ್ಲವನ್ನೂ ಸಮಯಕ್ಕೆ ಸರಿಯಾಗಿ ತೀರಿಸಿಕೊಂಡು ಮೊನ್ನೆ ಮತ್ತೆ ನನ್ನ ಸಾರೀ ನಮ್ಮ ಮನೇಗೇ ಸೇರಿದೆ ರೀ.

ಮನೆ ಸೇರಿದವನೇ ಎಂದಿನ ಅಭ್ಯಾಸದಂತೆ ಷೂನ ಬಿಚ್ಚಿ ಒಂದು ಮೂಲೆಗೆ ಎಸೆದೆ. ಅಭ್ಯಾಸದಂತೆ ಮನೆಯ ಬಾಸಿನಿಂದ ಅದೇನೂ ಸೌಂಡೇ ಇಲ್ಲಾ. ಪಾಪ ಅದೇನಾಗಿದೆಯೋ ಇವಳಿಗೆ ಅಂತ ಚಿಂತೆ ಹತ್ತಿತ್ತೂ ಕಣ್ರೀ. ಎದುರಿಗೇ ಕಲ್ಲು ಗುಂಡಿನ ಹಾಗೆ ಕೂತಿದ್ದರ ಹೀಗ್ಯಾಕೆ ಬಾಯಿಗೆ ಹೊಲಿಗೆ ಹಾಕಿಕೊಂಡಿದಾಳೆ ಅಂತ ಆಶ್ಚರ್ಯ ಪಡುತ್ತಾ ಅಂಗಿ ಬಿಚ್ಚಿ ಬಾಗಿಲ ಮೇಲೆ ಎಸೆದೆ. ಅದಕ್ಕೂ ರೆಸ್ಪಾನ್ಸು ಇಲ್ಲ! ಪ್ಯಾಂಟು ತೆಗೆದು ಸೀದಾ ಇನ್ನೊಂದು ಬಾಗಿಲ ಮೇಲೆ ಎಸೆದೆ, ಅದು ಹೋಗಿ ರೂಫಿನಲ್ಲಿನ ಮೊಳೆಗೆ ನೇತುಹಾಕಿಕೊಂಡಿತು - ಅದಕ್ಕೂ ಪ್ರತಿಕ್ರಿಯೆ ಇಲ್ಲಾ. ಅಪ್ಪಾ ಇವಳಿಗೆ ಇದೇನು ಆಗಿಹೋಯಿತು ಅಂತ ಸಖತ್ ಆಶ್ಚರ್ಯ ಆಗಿಬಿಟ್ಟಿತು. ಹೊರಗಡೆಯಿಂದ ಬಂದವನು ನೇರವಾಗಿ ಅವಳ ಸೀರೆ ಇಟ್ಟಿರೋ ಕಬೋರ್ಡನ್ನ ಮುಟ್ಟಿ ಅದಕ್ಕೆ ಮೈಲಿಗೆ ಮಾಡಿ ಜಗಳ ಆಡಿರೋ ಅನುಭವ ನೆನಪಿಗೆ ಬಂತೂ. ನೇರ ಕಬೋರ್ಡಿನ ಬಳಿಗೆ ನಡೆದು ಅದನ್ನೂ ಮುಟ್ಟಿದೆ! ಆಗಲೂ ಸಹ ನನ್ನವಳು ಕಲ್ಲು ಗೊಂಬೆಯ ಹಾಗೆ ಕುಳಿತಿದ್ದಾಳೆ! ಇದಕ್ಕೆ ಅದೇನೋ ಆಗಿಬಿಟ್ಟಿದೆ, ನಾನು ಮನೆಯಲ್ಲಿ ಇಲ್ಲದಿದ್ದಾಗ ಸಿಬಿಐನವರು ಬಂದು ಮನೆ

ರೈಡು ಮಾಡಿಬಿಟ್ಟರೋ ಅಥವಾ ಲೋಕಾಯುಕ್ತರು ಮನೆ ರೈಡು ಮಾಡಿದರೋ ಅಂತ ಹೆದರಿಕೆ ಶುರುವಾಗಬೇಕೆ?'' ಅದೇನು ಮರೀ ತೆಪ್ಪಗಿದ್ದೀ, ನಾನು ಅದೇನೇನು ಮಾಡಿದರೂ ತೆಪ್ಪಗೇ ಇದೀಯಲ್ಲಾ ಯಾಕೇ? ನನ್ನ ಚಿನ್ನಂಗೆ ಅದೇನಾಯಿತೂ ಅಂತ ಲಲ್ಲೆ ಮಾಡಿದೇರೀ.''

''ಒಂದು ಹೊಸಾ ನಿರ್ಣಯ ತಗೊಂಡಿದೀನೀ...'' ಅಂದಳು ನನ್ನಾಕೆ!


''ಅದೇನೂ ಹೊಸಾದ್ದೂ?'' ಅಂದೆ! ''ಹೊಸದಾಗಿ ನಿಮಗೆ ಅದೇನು ಹೇಳಬಾರದು.... ಅಂತ'' ಅಂತಂದಳು! ಹಾಗಿದ್ದರೆ ಇನ್ನುಮೇಲೆ ನಮಗೆ ಸಂಪೂರ್ಣ ಸ್ವಾತಂತ್ರವೇ? ಅಂದೆ. ''ಸಂಪೂರ್ಣ ಸ್ವಾತಂತ್ರ? ಹ್ಹ ಹ್ಹ ಹ್ಹಾ...'' ಅಂದಳು.

''ಏನು ಈ ಹ್ಹ...ಹ್ಹ....ಹ್ಹಾ... ಅರ್ಥ'' ಎಂದೆ. ''ಇನ್ಮೇಲೆ ಹೊಸದೇನೂ ಹೇಳುಲ್ಲ ಹಳೇದನ್ನೇ ಮಾಡಿ ಅಂತ ಹಕ್ಕೊತ್ತಾಯ ಹೇರ್ತೀನಿ....'' ಅಂದಳು! ''ಇದೇನು ಹೊಸಾ ರಾಗ...?'' ''ಸಾಹಿತ್ಯ ಸಮ್ಮೇಳನಕ್ಕೆ ನಾವು ಬರದಿದ್ದರೆ ಅದೇನಾಯ್ತು? ಅಲ್ಲಿ ನಿರ್ಣಯವಾಗಿಲ್ಲವೇ ಅದು ನನಗೂ ಅಪ್ಲೈ ಆಗುತ್ತೆ.''

''ಅದೇನು...'' ಅಂತ ಕೇಳಲು ಹೊರಟವನಿಗೆ ತಡೆಯೊಡ್ಡಿ ಅವಳೇ ಹೇಳಿದಳು ''ಹೊಸಾ ನಿರ್ಣಯಗಳನ್ನ ಮಾಡೋಲ್ಲ ಹಳೇದನ್ನೇ ಜಾರಿ ಮಾಡಿ ಅಂತ ನೀವೆಲ್ಲಾ ಸೇರಿ ತೀರ್ಮಾನ ತಗೊಂಡಿಲ್ಲವೇ ಹಾಗೆ ಇನ್ಮೇಲೆ ಹೊಸದನ್ನ ಏನೂ ಹೇಳುಲ್ಲ ಮೊದಲೇ ಹೇಳಿರೋದನ್ನ ನೀವು ಪಾಲಿಸಬೇಕು ಅಷ್ಟೇ...'' ಅಂದಳು!

ಮನೇಲಿ ಹೊಸಾ ನಿರ್ಣಯ ಜಾರಿ ಆಗಿದೆ. ನೀವೂ ಸಮ್ಮೇಳನಕ್ಕೆ ಬಂದಿದ್ದರೆ ನಿಮಗೂ ಸಹ ಪ್ರತಿದಿನ ಹೇಗಿರಬೇಕು ಅಂತ ಹೇಳಿಸಿಕೊಳ್ಳೋದು ತಪ್ಪುತ್ತಿತ್ತು ಅದನ್ನೇ ನೀವು ಕಳಕೊಂಡಿದ್ದು ಅಂತ ನನ್ನ ವ್ಯಥೆ ಅಷ್ಟೇ ರೀ ಸರ.

(ಮೊನ್ನೆ ಮೂಡಬಿದಿರಿಯಲ್ಲಿ ನಡೀತಲ್ಲಾ ಸಾಹಿತ್ಯ ಸಮ್ಮೇಳನ - ಅಲ್ಲಿ ಹೊಸಾ ನಿರ್ಣಯಗಳನ್ನೇನೂ ತೆಗೆದುಕೊಳ್ಳದೆ ಹಳೇದನ್ನೇ ಜಾರೀ ಮಾಡೀ ಅಂತ ಒಂದು ಹೊಸಾ ನಿರ್ಣಯ ತಗೊಂಡರಂತೆ!)



ಹೀಗೊಂದು ಹಾಸ್ಯೋತ್ಸವ

- ಶಿವು

ಮೊನ್ನೆ ಬೆಂಗಳೂರಿನಲ್ಲಿ ಅತ್ಯಂತ ಚೇತೋಹಾರಿಯಾದ ನಗೆ ಕಾರ್ಯಕ್ರಮವೊಂದು ನಡೆದುಹೋಯಿತು. ಇಲ್ಲ, ಖಂಡಿತವಾಗಿ ಕೃಷ್ಣೇಗೌಡರು, ಅ.ರಾ. ಮಿತ್ರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿರಲಿಲ್ಲ. ಓಹೋ, ಎಂ.ಎಸ್. ನರಸಿಂಹಮೂರ್ತಿ, ಮಾಸ್ಟರ್ ಹಿರಣ್ಣಯ್ಯ ಇದ್ದರೇನೋ ಅಂತ ನೀವು ಭಾವಿಸಿದರೆ ಅದೂ ಸಹಾ ತಪ್ಪು ಊಹೆಯಾದೀತು. ಯಾವ ಪೂರ್ವ ಸಿದ್ಧತೆಯೂ ಇಲ್ಲದೆ, ನೇರವಾಗಿ ವೇದಿಕೆಗೆ ಬಂದು ಪ್ರೇಕ್ಷಕರೊಂದಿಗೆ ಸರಸ ಸಂಭಾಷಣೆ ನಡೆಸುತ್ತಲೇ, ನೋಡುಗರ ಅಪೇಕ್ಷೆಯಂತೆ ಆಶು ಕವನ, ಆಶು ನಾಟಕಗಳನ್ನು ಸೃಷ್ಟಿಸುತ್ತ, ಎರಡು ಘಂಟೆಗಳ ಕಾಲ 'ನಿಮಿಷಕ್ಕೊಂದು ನಗು' ಎಂಬಂತೆ ಸಭಾಂಗಣದಲ್ಲಿದ್ದ ಎಲ್ಲರನ್ನೂ ಬಿದ್ದು ಬಿದ್ದು ನಗುವಂತೆ ಮಾಡಿ, ರಂಜಿಸಿದವರು ಜಿಮ್, ಪಾಲ್, ರಿಛರ್ಡ್, ಲೀ ಎಂಬ ನಾಲ್ವರು ತರುಣರು ಮತ್ತು ಸೂಕಿ ಎಂಬ ಕಿಲಾಡಿ ತರುಣಿ.

ಲಂಡನ್ನಿನ 'ದ ಕಾಮಿಡಿ ಸ್ಟೋರ್' ಎಂಬ ಸಂಸ್ಥೆ ಆಯೋಜಿಸಿದ್ದ ಈ ಕಾರ್ಯಕ್ರಮ ಬೆಂಗಳೂರಿನ ನಾಗರಿಕರಿಗೆ ನಿಜಕ್ಕೂ ಒಂದು ಹಾಸ್ಯದ ರಸದೌತಣವಾಗಿತ್ತು. ಎಂಭತ್ತರ ದಶಕದ ಉತ್ತರಾರ್ಧದಲ್ಲಿ ಸ್ಟಾರ್ ಛಾನಲ್ಲಿನಲ್ಲಿ ಬಿತ್ತರವಾಗುತ್ತಿದ್ದ ''ಹೂಸ್ ಲೈನ್ ಈಸ್ ಇಟ್ ಎನಿವೇ'' ಕಾರ್ಯಕ್ರಮವನ್ನು ನೋಡಿದವರಿಗೆ ಈ ತಂಡವೇನೂ ಹೊಸದಲ್ಲ. ಆದರೂ ಇಂತಹ ಆಶು ಕಾರ್ಯಕ್ರಮಗಳನ್ನು ಪ್ರೇಕ್ಷಕನಂತೆ ಭಾಗವಹಿಸಿ ನೋಡುವ ಮಜಾ ಟಿ.ವಿ.ಯ ಪುಟ್ಟ ತೆರೆಯಲ್ಲಿ ನೋಡುವಾಗ ಸಿಗಲಾರದು ಅನ್ನಿಸುತ್ತದೆ.

ಅಂದಿನ ಕಾರ್ಯಕ್ರಮ ಬೆಂಗಳೂರಿನವರಿಗೆ ಒಂದು ವಿನೂತನ ಪ್ರಯೋಗ. ಪ್ರಾರಂಭದಲ್ಲೇ ಜಿಮ್ ವೇದಿಕೆಗೆ ಬಂದು, ಪ್ರೇಕ್ಷಕರನ್ನುದ್ದೇಶಿಸಿ, ''ಮಹಾಜನಗಳಲ್ಲಿ ವಿನಂತಿ. ಇದು ನಿಮ್ಮ ಕಾರ್ಯಕ್ರಮ. ನಿಮ್ಮ ಭಾಗವಹಿಸುವಿಕೆ ನಮಗೆ ಅತ್ಯಂತ ಮುಖ್ಯ. ಹಾಗೆಂದ ಮಾತ್ರಕ್ಕೆ ನೀವು ಪ್ರಶ್ನೆ ಕೇಳಿದ ತಪ್ಪಿಗೆ ನಿಮ್ಮನ್ನು ಕೊಂಕು ಹಾಸ್ಯಕ್ಕೆ ಗುರಿಪಡಿಸಿ, ಲೇವಡಿ ಮಾಡಲು ನಾವು ಉದ್ದೇಶಿಸಿದ್ದೇವೆಂದು ನೀವು ಭಾವಿಸಿದ್ದರೆ ಆ ಭಾವನೆ ಖಂಡಿತ...'' ಎಂದು ಹೇಳಿ ಒಂದು ಸಣ್ಣ Pause ಕೊಟ್ಟು ''ಸರಿ'' ಎಂದಾಗ, ಈ ಅನಿರೀಕ್ಷಿತ ತಿರುವು ಪ್ರೇಕ್ಷಕರನ್ನು ನಗೆಗಡಲಿನಲ್ಲಿ ಮುಳುಗಿಸಿತು.

ಕಾರ್ಯಕ್ರಮ ಮುಂದೆ ಸಾಗುತ್ತಿದ್ದಂತೆ ಒಮ್ಮೆ ಪಾಲ್, ''ನಮ್ಮ ಮುಂದಿನ ಸ್ಕಿಟ್ ನಡೆಸಲು ಯಾವುದಾದರೊಂದು ಸ್ಥಳವನ್ನು ಸೂಚಿಸಿ'' ಎಂದು ಪ್ರೇಕ್ಷಕರನ್ನು ಕೇಳಿದಾಗ, ''ಬಚ್ಚಲು ಮನೆ', 'ಪಾರ್ಕ್', 'ಅಡಿಗೆ ಮನೆ', 'ಆಟೋ ರಿಕ್ಷಾ' ಎಂಬೆಲ್ಲಾ ಸಲಹೆಗಳು ಸಭಾಂಗಣದಲ್ಲಿ ಹಾರಾಡಿದವು.

'ಸರಿ ಆಟೋರಿಕ್ಷಾನೇ ಇರಲಿ' ಎಂದು ಪಾಲ್ ಹೇಳಿದ ತಕ್ಷಣ, ಜಿಮ್ ಒಂದು ಕುರ್ಚಿ ಹಿಡಿದುಕೊಂಡು ಬಂದು ವೇದಿಕೆಯ ಮುಂಭಾಗದಲ್ಲಿ ಇರಿಸಿ ಅದರಲ್ಲಿ ಕೂತ. ಪಾಲ್ ತನ್ನ ಕುರ್ಚಿಯನ್ನು ಸಾರಥಿ ಜಿಮ್‌ನ ಹಿಂದೆ ಹಾಕಿಕೊಂಡು ಆಟೋ ಪ್ರಯಾಣಿಕನಾದ. ತಕ್ಷಣ ಇಬ್ಬರೂ ತಮ್ಮ ''ಆಟೋ ಪಯಣದ ಯುಗಳ ಗೀತೆ''ಯನ್ನ ಪ್ರಾರಂಭಿಸಿಯೇ ಬಿಟ್ಟರು. ಇದಕ್ಕೆ ರಿಛರ್ಡ್‌ನ ಇಲೆಕ್ಟ್ರಿಕ್ ಪಿಯಾನೋದ ಹಿಮ್ಮೇಳ ಬೇರೆ. ಇವರ ಹಾಡುಗಾರಿಕೆ ಒಂದೆರಡು ನಿಮಿಷ ಆಗುಕ್ಕಿಲ್ಲ, ವೇದಿಕೆಯ ಹಿಂದಿನಿಂದ ಸೂಕಿ ಮುಂದೆ ಓಡಿ ಬಂದು "Freeze!' ಎಂದಾಗ ಚಾಲಕ ಹಾಗೂ ಪಯಣಿಗ ಇಬ್ಬರೂ ಬೊಂಬೆಗಳಂತೆ ತಾವು ಇದ್ದ ಭಂಗಿಯಲ್ಲೇ ನಿಂತುಬಿಟ್ಟರು.

ಪ್ರೇಕ್ಷಕರನ್ನು ಪ್ರಶ್ನಿಸುವ ಕೆಲಸ ಈಗ ಸೂಕಿಯದ್ದು.

'ಇವರಿಬ್ಬರೂ ನಟಿಸಲು ಯಾವುದಾದರೊಂದು ಶೈಲಿಯನ್ನು ಸೂಚಿಸಿ' ಎಂದು ಸೂಕಿ ಕೇಳಿದಾಗ, ಹಾರರ್, ರೊಮಾನ್ಸ್, ಇವೇ ಮುಂತಾಗಿ ಅನೇಕ ಸಲಹೆಗಳು ಬಂದವು. ಒಂದೊಂದನ್ನೂ ಸಮರ್ಥವಾಗಿ ಬಹು ಹಾಸ್ಯಮಯವಾಗಿ ಅಭಿನಯಿಸಿದ ನಂತರ ''ಷೇಕ್ಸ್‌ಪಿಯರನ ನಾಟಕ' ಎಂಬ ಸಲಹೆ ಪ್ರೇಕ್ಷಕರೊಬ್ಬರಿಂದ ಹಾರಿಬಂತು.

ತಕ್ಷಣ ಪ್ರಯಾಣಿಕನಂತೆ ಹಿಂದೆ ಕುಳಿತಿದ್ದ ಪಾಲ್,

"Yonder, there is red light!' ಎಂದ. ಒಡನೆಯೇ ಚಾಲಕ ಜಿಮ್.

"To stop or not to stop, that is the question' ಎಂದಾಗ ಸಭಿಕರು ಪಟ್ಟ ಖುಷಿಯನ್ನು ಮರೆಯುವಂತೆಯೇ ಇಲ್ಲ. ಸಭಿಕರನ್ನೂ ಸೇರಿಸಿಕೊಂಡು 'ಪಾರ್ಟಿ ಗೇಮ್' ಒಂದನ್ನು ಆಡಿದ್ದು ಅಂದಿನ ವೈಶಿಷ್ಟ್ಯ. ಇದರಲ್ಲಿ ತಂಡದ ಒಬ್ಬ ಸದಸ್ಯನನ್ನು ಸಭಾಂಗಣದಿಂದ ಹೊರಕ್ಕೆ ಕಳಿಸಿ, ಅವನಿಗೆ ಕೇಳಿಸದಂತೆ ತಂಡದ ಮಿಕ್ಕ ಸದಸ್ಯರು ತೀರ ಅಸಂಗತವಾದ, ಅಪರೂಪವಾದ ವೃತ್ತಿಯೊಂದನ್ನು ಸೂಚಿಸುವಂತೆ ಸಭಿಕರನ್ನು ಕೇಳುತ್ತಾರೆ. ಆ ವೃತ್ತಿ ನಿಷ್ಕರ್ಷೆಯಾದ ನಂತರ, ಹೊರಗೆ ಕಳಿಸಿದ ವ್ಯಕ್ತಿಯನ್ನು ಮತ್ತೆ ಒಳಕ್ಕೆ ಬರಮಾಡಿಕೊಂಡು, ಅವನಿಗೆ ಅನೇಕ ಸೂಚನೆ ಅಥವಾ ಕ್ಲೂಗಳನ್ನು ಕೊಟ್ಟು ಅವನಿಂದ ಆ ವೃತ್ತಿಯನ್ನು ಸರಿಯಾಗಿ ಊಹಿಸುವಂತೆ ಮಾಡುವುದು ಈ ಆಟದ ಉದ್ದೇಶ. ಆ ಸಂಜೆ ಸೂಕಿಯನ್ನು ಹೊರಗೆ ಕಳಿಸಿದ್ದರು. ವೃತ್ತಿಯೊಂದನ್ನು ಸೂಚಿಸುವಂತೆ ಸಭಿಕರನ್ನು ಕೇಳಿದಾಗ ಮೊದಲ ಐದಾರು ಸಲಹೆಗಳು, ಟಾಯ್ಲೆಟ್ ಕ್ಲೀನಿಂಗ್, ಕಮೋಡ್ ಕ್ಲೀನಿಂಗ್, ಎಂದು ಮುಂತಾಗಿ ಬಚ್ಚಲುಮನೆಯ ಸರಹದ್ದಿನಲ್ಲೇ ಸುಳಿದಾಡಿದವು. "How come you guys are obsessed with toilet? Could constipation be the reason?' ಎಂದು ಜಿಮ್ ತಮಾಷೆಯಾಗಿಯೇ ಛೇಡಿಸಿದಾಗ ಸಲಹೆಗಳು ಬದಲಾದವು. ಆ ಕ್ಷಣ ನನಗೆ ''ವರ್ಷದ್ ವ್ಯಕ್ತಿ, ಹರ್ಷ ಮೆಹ್ತಾ'' ಎಂಬ ಹಿಂದಿನ ಅಪರಂಜಿಯ ಹನಿಗವನವೊಂದು ನೆನಪಿಗೆ ಬಂದು ''ಮಂತ್ರಿಗಳಿಗೆ ಲಂಚ ಕೊಡುವ

ಉದ್ದೇಶದಿಂದ, ಸೂಟ್ ಕೇಸಿನೊಳಕ್ಕೆ ಕರೆನ್ಸಿ ನೋಟುಗಳನ್ನು ತುಂಬುವ ವೃತ್ತಿ'' ಎಂದು ಸಜೆಸ್ಟಿಸಿದೆ. ಟಾಯ್ಲೆಟ್ ಸಲಹೆಗಳಿಂದ ಸುಸ್ತಾಗಿದ್ದ ಜಿಮ್ ನನ್ನ ಈ ಸಲಹೆಯನ್ನು ಗಬಕ್ಕನೆ ಸ್ವೀಕರಿಸಿದ. ಅನಂತರ ಕರೆನ್ಸಿ ನೋಟುಗಳ ರೂಪ. ಮೌಲ್ಯ, ಲಂಚ ಸ್ವೀಕರಿಸುವ ಮಂತ್ರಿಯ ಪೋರ್ಟ್‌ಫೋಲಿಯೋ ಇವುಗಳನ್ನೆಲ್ಲಾ ಸಭಿಕರೊಂದಿಗೆ ಸಮಾಲೋಚಿಸಿ, ನಿರ್ಧರಿಸಿದ ನಂತರ, ಎಲ್ಲರೂ ಒಟ್ಟಿಗೆ ಕರತಾಡನ ಮಾಡಿ (ಸೂಕಿಗೆ ಒಳಗೆ ಬರಲು ಇದು ಪೂರ್ವ ನಿರ್ಧಾರಿತ ಸೂಚನೆ) ಸೂಕಿಯನ್ನು ಒಳಗೆ ಬರಮಾಡಿಕೊಂಡೆವು. ಸೂಕಿ ವೇದಿಕಯನ್ನೇರಿದ ತಕ್ಷಣ ತಂಡದ ಇತರ ಸದಸ್ಯರುಗಳಿಂದ ಕ್ಲೂಗಳ ಸುರಿಮಳೆ. ಕೆಲವನ್ನು ಮೈಮ್ ಮೂಲಕ, ಇನ್ನು ಕೆಲವನ್ನು ಪರೋಕ್ಷ ಉದಾಹರಣೆಗಳ ಮೂಲಕ ಸದಸ್ಯರು ತಿಳಿಸುತ್ತಿದ್ದಾಗ ಒಂದೊಂದೂ ಒಂದು ನಗೆ ಬುಗ್ಗೆಯನ್ನೇ ಚಿಮ್ಮಿಸುತ್ತಿತ್ತು. ''ಸೂಟ್‌ಕೇಸ್'' ಅನ್ನು ಸೂಚಿಸಲು ಜಿಮ್ ತನ್ನ ತೋರು ಬೆರಳನ್ನು ಮಡಿಚಿ, "A case' ಮಧ್ಯಮವನ್ನು ಮಡಿಚಿ "B case' ಎಂದು ಹೇಳು ಉಂಗುರದ ಬೆರಳನ್ನು ಮಡಿಚಿ ಏನನ್ನೂ ಹೇಳದೇ ಅವನ ಕಡೆ ಪ್ರಶ್ನಾರ್ಥಕವಾಗಿ ನೋಡಿದ. ತಕ್ಷಣವೇ ಸೂಕಿ, ಸೀ ಕೇಸ್ ಅಂದಾಗ, ಜಿಮ್ "Are you See ki?' ಅಂತ ಕೇಳಿದ. ಸೂಕಿ ಜೋರಾಗಿ ನಗುತ್ತಾ "No I am suki, and the word is soo case, suit case" ಎನ್ನುತ್ತಾ ಮಗುವಿನಂತೆ ಕುಣಿದಾಡಿದಾಗ ಸಭಿಕರಲ್ಲೂ ಅದೇ ಸಂತಸ ಸಾಂಕ್ರಾಮಿಕವಾಯಿತು. ಒಂದು ಹತ್ತು ನಿಮಿಷಗಳ ಕಾಲ ಇದೇ ರೀತಿ ಸೂಚನೆಗಳನ್ನು ಕೊಟ್ಟು ಸೂಕಿಯ ಜನ್ಮ ಜಾಲಾಡಿ, ಕೊನೆಗೂ ಸೂಕಿ, "My profession is to stuff three and a half Euros into the suit case to give as bribe to the minister of the flea cirxus" ಎಂದು ಸರಿಯಾಗಿ ಉತ್ತರಿಸಿದಾಗ ಸಭಾಂಗಣಕ್ಕೆ ಸಭಾಂಗಣವೇ ದಿಗ್ವಿಜಯ ಸಾಧಿಸಿದಂತೆ ಕುಣಿದಾಡಿತು.

ಇಷ್ಟೊಂದು ನಕ್ಕು ಬಹು ದಿನಗಳಾಗಿದ್ದವು. ಕಳೆದ ಒಂಭತ್ತು ವರ್ಷಗಳಿಂದ ಹಾಸ್ಯೋತ್ಸವಗಳಿಗೆ ಚಾಲನೆ ಕೊಟ್ಟು ಆ ಜವಾಬ್ದಾರಿಯ ನಿರ್ವಹಣೆಯ ಹೆಣಗಾಟದಲ್ಲಿ ನಗುವುದೇ ಮರೆತು ಹೋಗುತ್ತೇನೋ ಎಂಬ ಹೆದರಿಕೆ ನನಗೆ ಶುರುವಾಗಿತ್ತು. ಸಧ್ಯ, ಇನ್ನು ಆ ಭಯವಿಲ್ಲವಲ್ಲ. ಒಂದಲ್ಲ ಒಂದು ದಿನ ಕನ್ನಡದ ನೆಲದಲ್ಲಿ ಇಂತಹ ಒಂದು ಸಾಹಿತ್ಯಕ, ಚುರುಕು ಹರಟೆಯ ಆಶು ಕಾರ್ಯಕ್ರಮ ಮೂಡಿ ಬರಲಿ ಎಂಬುದೇ ನನ್ನ ಕನಸು.

ಎಂದು ನನಸಾಗುತ್ತದೋ!

ಹಾಸ್ಯ ಲೇಖಕನೊಬ್ಬನ ಉಯಿಲು

- ಕೃಷ್ಣ ಸುಬ್ಬರಾವ್

''ಲೋ, ರಾಮಣ್ಣ, ಸ್ವಲ್ಪ ಅರ್ಜೆಂಟಾಗಿ ಲಾಯರ್ ಒಬ್ಬನನ್ನು ಕರೆದುಕೊಂಡು ಬರ್ತೀಯಾ, ನಾನೊಂದು ವಿಲ್ ಬರೀಬೇಕು'' ಅಂತ ಫೋನ್ ಮಾಡಿದೆ. ಅವನಿಗೆ ಅತ್ಯಂತ ಗಾಬರಿಯಾಗಿ ''ಏಕೆ ಏನಾಯಿತು? ನಿನ್ನೆ ತಾನೆ ವಿದ್ಯಾರ್ಥಿ ಭವನದಲ್ಲಿ ಎರಡು ಮಸಾಲೆ ತಿಂದು ನನ್ನ ಜೊತೆ 5 ಕಿಲೋಮೀಟರ್ ವಾಕ್ ಮಾಡಿದಿ'' ಅಂತ ಕೇಳಿದ.

''ನಾನು ಆರೋಗ್ಯವಾಗಿಯೇ ಇದ್ದೀನಿ. ಇವತ್ತು ಬೆಳಿಗ್ಗೆ ವಿ.ಆರ್.ಎಸ್. ದರ್ಶಿನಿಯಲ್ಲಿ ಮತ್ತೆರಡು ಮಸಾಲೆನೂ ತಿಂದೆ, ನಿನಗೆ ಫೋನ್ ಮಾಡ್ತಿರೋದು, ಕೈ, ಕಾಲು ಗಟ್ಟಿಯಾಗಿರುವಾಗಲೇ ವಿಲ್ ಬರೆದಿಡುವುದು ಒಳ್ಳೇದು, ಬರೋವಾರ ನನಗೆ 60 ವರ್ಷ ತುಂಬುತ್ತೆ. ಅರವತ್ತಾದ ಮೇಲೆ ''ವಿಲ್'' ಬರೆದರೆ ನಾಳೆ ಯಾರಾದರೂ ಡಿಸ್‌ಪ್ಯುಟ್ ಮಾಡಬಹುದು. ಅರಳು ಮರಳು ಇದ್ದಾಗ ಬರೆದಿದ್ದು ಅಂತ ಕೋರ್ಟಿನವರು ತಳ್ಳಿ ಹಾಕಬಹುದು ಅದಕ್ಕೇ ಈ ಅರ್ಜೆಂಟ್ ಕಾಲ್''

''ಅದ್ಸರಿ, ವಿಲ್ ಬರೀಬೇಕಾದರೆ ಏನಾದರು ಆಸ್ತಿ ಇರಬೇಕು. ಅದೂ ಸ್ವಯಾರ್ಜಿತ ಆಸ್ತಿ. ನಿನಗಿರೋದು ಒಂದು ಮುರುಕಲು ಮನೆ ಅದೂ ಅರಕಲಗೂಡಿನಲ್ಲಿ. ಪಿತ್ರಾರ್ಜಿತ ಆಸ್ತಿ. ನೀನು ವಿಲ್ ಬರೀಲಿ ಬರಿಯದಿರಲಿ ಅದಕ್ಕೆ ನಿನ್ನ ಮಕ್ಕಳಿಗೆ ಹಕ್ಕಿದೆ. ಸುಮ್ಮನೆ ವಿಲ್ ಬರೆದು ಲಾಯರ್ ಜೋಬು ಏಕೆ ತುಂಬಿಸ್ತೀಯಾ?'' ಕೇಳಿದ ರಾಮಣ್ಣ

''ಏನಯ್ಯಾ ನೀನು ನನ್ನನ್ನ ಹಾಗೆ ಹೀಯಾಳಿಸ್ತೀಯಾ? ನಾನು ಒಬ್ಬ ಲೇಖಕ ಅನ್ನೋದನ್ನ ಮರೀಬೇಡ. ನನ್ನ ಸಾಹಿತ್ಯವೇ ನನ್ನ ಆಸ್ತಿ. ಈಗ ನನಗೆ, ನನ್ನ ಸಾಹಿತ್ಯಕ್ಕೆ ಮೂರು ಕಾಸಿನ ಬೆಲೆ ಇಲ್ಲದಿರಬಹುದು, ನಾನು ಸತ್ತಮೇಲೆ ಅದಕ್ಕೆ ಬೆಲೆ, ಆದರ, ಗೌರವ ಬರಬಹುದು, ಆದರಿಂದ ನನ್ನ ಕುಟುಂಬಕ್ಕೆ, ಸ್ನೇಹಿತರಿಗೆ, ತೊಂದರೆಯಾಗಬಾರದು ಅದಕ್ಕೆ ನಾನು ಈಗಲೇ ''ವಿಲ್'' ಬರೆಸಿಡುತ್ತೇನೆ.

''ಓಹೋ, ನಿನ್ನ ತಲೆ ಕೆಟ್ಟಿರೋ ಹಾಗೆ ಕಾಣುತ್ತೆ, ಅಲ್ಲಯ್ಯ ನೀನು ಸತ್ತ ನಂತರ ನಿನ್ನ ಸಾಹಿತ್ಯಕ್ಕೆ ಮನ್ನಣೆ ಸಿಗುತ್ತೆ ಅಂತಾ ಕಲ್ಪನೆ ಮಾಡಿಕೊಂಡು ಅದಕ್ಕೊಂದು ವಿಲೇವಾರಿ ವಿಲ್ ಬರೀತೀಯಾ? ನಿನ್ನ ಶಾಶ್ವತ ಸಾಹಿತ್ಯ ಅಟ್ಟದ ಮೇಲಿದೆ. ಅದನ್ನು ಹೇಗೋ ಸಂಬಾಳಿಸುತ್ತಾರೆ. ಬೆಂಗಳೂರಿನಲ್ಲಿ ಸಾವಿರಾರು ಸರ್ಕುಲೇಟಿಂಗ್ ಲೈಬ್ರರಿಗಳಿವೆ. ಅಲ್ಲಿಗೆ ದಾನ ಮಾಡುತ್ತಾರೆ ಬಿಡು. ಕಡೇ ಪಕ್ಷ ಅಷ್ಟು ಮಾಡಲ್ಲವೆ ನಿಮ್ಮನೆಯವರು? ಅಥವಾ ತೂಕಕ್ಕೆ ಹಾಕಿ ನಾಲ್ಕಾರು ಕಾಸು ಗಳಿಸುತ್ತಾರೆ. ಅದಕ್ಯಾಕೆ ಯೋಚನೆ ಮಾಡ್ತೀಯಾ'' ಅಂದ ರಾಮಣ್ಣ.

''ನೀನು ನನ್ನ ಆಪ್ತ ಸ್ನೇಹಿತನಾದ್ದರಿಂದ ಹೇಳ್ತಿದ್ದೀನಿ ನೋಡು. ಇವತ್ತೆಲ್ಲ ನಾಳೆ ಹಾಸ್ಯ ಸಾಹಿತ್ಯಕ್ಕೆ ಒಳ್ಳೆ ಕಾಲ ಬರುತ್ತೆ. ಈಗಲೇ ನೋಡು ಹಾಸ್ಯ ಭಾಷಣಕಾರರಿಗೆ ಎಷ್ಟೊಂದು

ಸಮಸ್ಯೆ. ಊಟಕ್ಕೆ ಮುಂಚೆ ಒಂದು ಭಾಷಣ, ಊಟವಾದ ಮೇಲೆ ಇನ್ನೊಂದು ಭಾಷಣ. ಕೆಳಗೆ ಕೂತುಕೊಳ್ಳೋದಕ್ಕೆ ಬಿಡೋದಿಲ್ಲ ಕೆಲವರಿಗೆ.''

''ಕೆಲವರು ಭಾಷಣಕ್ಕೆ ಅಂತ ನಿಂತರೆ, ಐದು ನಿಮಿಷ ನಿಲ್ಲೋದಕ್ಕೆ, ಬಿಡೋದಿಲ್ಲ, ಅದ್ಸರಿ ನೀನು ವಿಲ್ ಮಾಡೋದಕ್ಕೆ ಪ್ರಬಲವಾದ ಕಾರಣ ಹೇಳು ನಾನು ನನ್ನ ಕೊಲಿಗ್ ಗೋಪಿನ ಕರೆದುಕೊಂಡು ಬರ್ತೀನಿ. ಬಿ.ಎ.ಬಿ.ಎಲ್. ಮಾಡಿದ್ದಾನೆ. ಅವನಿಗೆ ಫೀಸ್ ಕೊಡಬೇಕು. ಕ್ಯಾಷ್ ಕೊಡಬೇಕು. ಪುಸ್ತಕದ ರೂಪದಲ್ಲಿ ಅಲ್ಲ''

''ಇಲ್ಲ, ಖಂಡಿತ ಇಲ್ಲ, ಹಾರ್ಡ ಕ್ಯಾಷ್ ಕೊಡ್ತೀನಿ. ಆದರೆ ಕಂತಿನಲ್ಲೊ! ನಾನು ಬರೆದದ್ದು ಸರ್ಕಾರದವರು ನಾಡ ಹಾಸ್ಯ ಅಥವಾ ನಾಡ ಜೋಕ್ ಆಗಿ ನಾಳೇ ಅದು ರಾಷ್ಟ್ರೀಯ ಜೋಕ್ ಆಗಿ ಅಂತರ ರಾಷ್ಟ್ರೀಯ....''

''ತಾಳು ತಾಳು, ಜೋಕ್ ಇಂತಹವರದ್ದೇ ಅಂತಾ ಯಾರೂ ಹೇಳೋಕ್ಕೇ ಆಗೊಲ್ಲ. ಆದ್ದರಿಂದ ಅದು ನಿನ್ನದಾಗೊಲ್ಲ ಬಿಡು.''

''ಇಲ್ಲಯ್ಯ, ನಾನು ಬರೆದ ಒರಿಜನಲ್ ಸಾಲುಗಳು ಕೆಲವಾದರೂ ಇವೆ. ಅದೂ ಇದು ಸೇರಿಸಿ ಅಥವಾ ತೆಗೆದು ಹಾಳುಮಾಡಿ ದೊಡ್ಡ ಗೊಂದಲ ಮಾಡಬಹುದು. ಅದಕ್ಕೆ ನಾನು ಸ್ಪಷ್ಟವಾಗಿ ಉಯಿಲಿನಲ್ಲಿ ಬರೆದಿಡುತ್ತೇನೆ. ಹಾಗೆ ನನ್ನ ಸಾಹಿತ್ಯವನ್ನು ಕೃತಿಚೌರ್ಯ ಮಾಡುವ ಹಕ್ಕನ್ನು ನನ್ನ ವಿಲ್‌ನಲ್ಲಿ ನಮೂದಿಸಿರುತ್ತೇನೆ. ಅವರನ್ನು ಬಿಟ್ಟು ಮತ್ಯಾರು ನನ್ನ ಸಾಹಿತ್ಯವನ್ನು ಕೃತಿಚೌರ್ಯ ಮಾಡೋ ಹಾಗಿಲ್ಲ. ನಾನು ಮಧ್ಯೆ ಮಧ್ಯೆ ಇಂಗ್ಲೀಷಿನಲ್ಲಿ ಬರೆದಿದ್ದನ್ನು ಹಾಗೇ ಅದೇ ಭಾಷೆಯಲ್ಲೇ ಬಳಸತಕ್ಕದ್ದು. ಭಾಷಾಂತರ ಮಾಡುವ ಹಾಗಿಲ್ಲ. ಮಾಡಿ ಪನ್ ಕೊಲ್ಲುವ ಹಾಗಿಲ್ಲ. ನನ್ನ ಉಯಿಲಿಗೆ ಸಂಬಂಧಪಟ್ಟ ಹಾಗೆ ಒಂದು ಧ್ವನಿಸುರುಳಿಯನ್ನು ಇಟ್ಟಿರುತ್ತೇನೆ.

ನನ್ನ ಅನಿಸಿಕೆಗಳನ್ನು ಸ್ಪಷ್ಟ ಮಾತಿನಲ್ಲಿ ಹೇಳಿರುತ್ತೇನೆ. ಮುಂದೆ ಏನಾದರೂ ವಿವಾದ, ಜಗಳವಾದಲ್ಲಿ ಕೋರ್ಟ್ ಕಛೇರಿಗಳಲ್ಲಿ ಅದನ್ನು ಉಪಯೋಗಿಸತಕ್ಕದ್ದು. ಉಯಿಲಿನ ಪ್ರತಿಯನ್ನು ಸಾಹಿತ್ಯ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪುಸ್ತಕ ಪ್ರಾಧಿಕಾರದಲ್ಲಿ ಇಟ್ಟಿರುತ್ತೇನೆ. ಕನ್ನಡ ಸಾಹಿತ್ಯ ಸೇವೆಗೆ ಇನ್ಯಾವುದಾದರೂ ಇಲಾಖೆಗಳು ಮುಂದೆ ಹುಟ್ಟಿಕೊಂಡರೆ ಉಯಿಲಿನ ಜೆರಾಕ್ಸ್ ಪ್ರತಿಯನ್ನು ಅವುಗಳಿಗೆ ಒದಗಿಸಬಹುದು. ಏನೇ ಆಗಲಿ ನನ್ನ ಮನೆಯವರಿಗೆ ನಾನು ಸತ್ತ ನಂತರವೂ ನನ್ನ ಸಾಹಿತ್ಯದಿಂದ ತೊಂದರೆಯಾಗಬಾರದು. ಬದುಕಿರುವಾಗಲೇ ಸಾಕಷ್ಟು ಅವರಿಂದ ಬೈಸಿಕೊಂಡಿದ್ದೇನೆ. ನಾನು ಸತ್ತ ನಂತರವಾದರೂ ನನಗೆ ಅದರಿಂದ ಮುಕ್ತಿ ಸಿಗಲಿ. ನನ್ನ ಸಾಹಿತ್ಯ ಪಠ್ಯ ಪುಸ್ತಕವಾದರೆ, ಅದರಲ್ಲಿ ಬರುವ ಹಣದಿಂದ ಈ ಉಯಿಲು ಬರೆದ ಲಾಯರ್‌ಗೆ ಹಾಗೂ ನನ್ನ ಸ್ನೇಹಿತ ರಾಮಣ್ಣನಿಗೆ ಖರ್ಚು ವೆಚ್ಚವನ್ನು ಕೊಡತಕ್ಕದ್ದು....'' ಅಂತಾ ಹೇಳುತ್ತಿದ್ದಂತೆ ಫೋನ್ ಕಟ್ಟಾಯಿತು.

★★★

ಬ್ರೇಕಿಲ್ಲದ ಬೆಳ್ಳಿಯ ತೇರು

– ಶಿವು

''ಆರ್ಕಿಮಿಡೀಸ್ ಸ್ನಾನಕ್ಕಾಗಿ ಬಾತ್‌ಟಬ್ಬಿಗೆ ಇಳಿದಾಗ ಏನಾಯಿತು?'' ಎಂಬ ಪ್ರಶ್ನೆಗೆ ''ಫೋನ್ ರಿಂಗಾಯಿತು'' ಅಂತ ಉತ್ತರ ಬಂತಂತೆ. ಇದು ಹಳೇ ರೀಡರ್ಸ್ ಡೈಜೆಸ್ಟ್ ಜೋಕ್ ಇರಬಹುದು. ಆದರೂ ನನಗೂ ಸಹ ಇಂತಹದೇ ಅನುಭವ ಸತತವಾಗಿ ಆಗುತ್ತಲೇ ಇರುತ್ತದೆ. ನಮ್ಮ ಬಚ್ಚಲು ಮನೆಯಲ್ಲಿ ಬಾತ್ ಟಬ್ಬೇನೂ ಇಲ್ಲ. ಆದರೆ, ಬೆಳಗ್ಗೆ ಎಂಟೂವರೆ ಹೊತ್ತಿಗೆ ಷೇವ್ ಮಾಡಿಕೊಳ್ಳುವ ಉದ್ದೇಶದಿಂದ ಮುಖಕ್ಕೆ ಸೋಪು ಬಳಿದುಕೊಳ್ಳುಕ್ಕಿಲ್ಲ, ದೂರದ ಓದುವ ಕೋಣೆಯಲ್ಲಿ ಫೋನು ಟ್ರಿನ್‌ಗುಟ್ಟತೊಡಗುತ್ತದೆ. ಎಷ್ಟು ಬೇಗ ಓಡಿದರೂ, ಫೋನು ಎಂಟು ಬಾರಿ ರಿಂಗಾಗಿ ನಾನು ರಿಸೀವರ್ ಎತ್ತಿ ಸೋಪು ಬಳಿದ ಕೆನ್ನೆಗೆ ತಾಕಿಸುವ ಹೊತ್ತಿಗೆ ಆ ಕಡೆ ಪಾರ್ಟಿ ಬೇಜಾರಾಗಿ ಫೋನನ್ನು ಕೆಳಗಿಟ್ಟಿರುತ್ತಾನೆ / ಳೆ. ನನ್ನ ಪಾಲಿಗೆ ಸ್ನಿಗ್ಧ ನೀರವತೆಯನ್ನು ಬಿಟ್ಟರೆ ಬೇರೇನೂ ದಕ್ಕುವುದಿಲ್ಲ.

ನನ್ನ ಅದೃಷ್ಟ, ಮೊನ್ನೆ ಬೆಳಗ್ಗೆ ಹಾಗಾಗಲಿಲ್ಲ. ರಿಸೀವರು ನನ್ನ ಕಿವಿಯನ್ನು ತಾಕಿದಾಗಲೂ ಸಾವಧಾನವೇ ಮೂರ್ತಿವೆತ್ತು ಬಂದಂತೆ ಆ ಬದಿಯಲ್ಲಿನ ಪ್ರಾಣಿ ನನ್ನ ದನಿಗೆ ಕಾಯುತ್ತಿತ್ತು.

''ಬೆಳಗ್ಗೆ ಹತ್ತೂವರೆಗೆ ಮನೆ ಹತ್ತಿರ ಬರುತ್ತೇನೆ. ರೆಡಿಯಾಗಿರು. ನರಸಿಂಹಸ್ವಾಮಿ ಗುಡಿಗೆ ಹೋಗಿಬರೋಣ'' ಎಂದ ಗೆಳೆಯ ಶ್ರೀನಿ. ನಾನು ''ರೈಟ್'' ಅಂದು ರಿಸೀವರ್ ಕೆಳಗಿಟ್ಟೆ.

ದೇವಸ್ಥಾನಗಳಿಗೆ ಆಗಾಗ ಹೋಗುವ ಸಂಪ್ರದಾಯ ನಮ್ಮ ಮನೆಯಲ್ಲಿ ಮೊದಲಿನಿಂದ ಬಂದಿಲ್ಲ. ತಂದೆಯವರ ಕಾಲದಿಂದ ''ದೇವರು ಎಲ್ಲೆಲ್ಲಿಯೂ ಇದ್ದಾರೆ'', ''ಕಾಯಕವೇ ಕೈಲಾಸ'', ''ಮನೆಯೇ ಕಾಶಿ ಮನವೇ ಗಂಗಾ'' ಎಂಬೆಲ್ಲ ಮಾತುಗಳು ಕಿವಿಯ ಮೇಲೆ ಬಿದ್ದು, ಅದಕ್ಕೂ ಮಿಗಿಲಾಗಿ ರಿಚುಯಲಿಸ್ಟಿಕ್ ಪೂಜೆಯ ಬಗ್ಗೆ ತಂದೆಯವರಿಗಿದ್ದ ಅನಾದರ ಸಹಜವಾಗಿಯೇ ಮಕ್ಕಳ ಮೇಲೆ ಪರಿಣಾಮ ಬೀರಿ, ಪರೀಕ್ಷೆಯ ಸಮಯದಲ್ಲಿ ಗಣೇಶನ ಗುಡಿಗೆ ಹೋಗಿ ಪೆನ್ನಿಗೆ ಪೂಜೆ ಮಾಡಿಸಿಕೊಂಡು ಬರುವುದನ್ನು ಬಿಟ್ಟರೆ, ಬೇರೇ ಸಮಯಗಳಲ್ಲಿ ನಮ್ಮ ಪೂಜೆ, ಪ್ರಾರ್ಥನೆಗಳೆಲ್ಲಾ ಮನೆಯ ದೇವರು ಮನೆಯಲ್ಲೇ.

ಗೆಳೆಯ ಶ್ರೀನಿ ಬೆಳೆದ ವಾತಾವರಣ ಇದಕ್ಕೆ ತದ್ವಿರುದ್ಧ. ವಾರಕ್ಕೆ ಆರು ಬಾರಿಯಾದರೂ ಶ್ರೀನಿ ದಂಪತಿಗಳು ನಮ್ಮ ಬಡಾವಣೆಯಲ್ಲಿರುವ ಎಲ್ಲಾ ದೇವಸ್ಥಾನಗಳಿಗೆ ಭೇಟಿ ನೀಡಿ, ದೇವರ ದರ್ಶನ ಪಡೆದು ಪಾವನರಾಗುತ್ತಿರುತ್ತಾರೆ. ಸದಾ

ನಗುಮೊಗದ ಸಜ್ಜನ ದಂಪತಿಗಳಾದ ಶ್ರೀನಿ ಮತ್ತು ಅಮೃತಾ ನಮ್ಮನ್ನು ದೇವಸ್ಥಾನಕ್ಕೆ ಅವರೊಂದಿಗೆ ಭೇಟಿ ನೀಡಲು ಆಗೊಮ್ಮೆ ಈಗೊಮ್ಮೆ ಆಹ್ವಾನಿಸಿದಾಗ "No harm done" ಎಂದುಕೊಂಡು ಅವರುಗಳೊಂದಿಗೆ ಹೋಗಿ ಬರುವುದನ್ನು ಇತ್ತೀಚೆಗೆ ಅಭ್ಯಾಸ ಮಾಡಿಕೊಂಡಿದ್ದೇನೆ.

ಹತ್ತೂವರೆಗೆ ಸರಿಯಾಗಿ ಶ್ರೀನಿ ಮನೆಗೆ ಬಂದ. ಟೀ ಕುಡಿಯುತ್ತಾ ಕುಳಿತಾಗ ''ಏನು ಸಮಾಚಾರ?'' ಅಂತ ಶ್ರೀನಿಯನ್ನ ಕೇಳಿದೆ. ''ಮೊನ್ನೆ ನರಸಿಂಹಸ್ವಾಮಿ ಗುಡಿಗೆ ಹೋಗಿದ್ದೆ. ಅಲ್ಲಿ ಇರುವ ದೊಡ್ಡ ತೇರಿಗೆ ಹೊಸದಾಗಿ ಬೆಳ್ಳಿಯ ಕವಚ ಹೊದಿಸಿದ್ದಾರೆ. ಆ ಬೆಳ್ಳಿಯ ತೇರನ್ನು ನೋಡಲು ಎರಡು ಕಣ್ಣುಗಳು ಸಾಲವು. ಅಷ್ಟು ಸುಂದರವಾಗಿದೆ ಅದು. ಮೊನ್ನೆ ಅದನ್ನು ಮೊದಲ ಬಾರಿಗೆ ಹೊರಗೆ ತೆಗೆದಿದ್ದರಂತೆ ದೇವಸ್ಥಾನದ ಮುಂದಿನ ರಸ್ತೆ ಸ್ವಲ್ಪ ಇಳಿಜಾರಾಗಿದೆ. ರಸ್ತೆಗೆ ಬಂದ ತಕ್ಷಣ ತೇರು ಆಟೋ ಪೈಲೆಟ್ ಮೋಡಿಗೆ ಹೋಗಿ, ತಾನಾಗಿಯೇ ಚಲಿಸಲು ಪ್ರಾರಂಭಿಸಿದಂತೆ. ಹಗ್ಗ ಎಳೆದು ಅದನ್ನು ನಿಲ್ಲಿಸಲು ಸುಮಾರು ಮೂವತ್ತು ಜನ ಹೆಣಗಬೇಕಾಯಿತಂತೆ. ಈಗ ಅರ್ಜೆಂಟಾಗಿ ಅದಕ್ಕೊಂದು ಬ್ರೇಕನ್ನು ಡಿಸೈನ್ ಮಾಡಿ ಅಳವಡಿಸಬೇಕಾಗಿದೆ. ಧರ್ಮದರ್ಶಿಗಳು ಹೇಗಾದರೂ ಈ ಕೆಲಸ ಮಾಡಿಸಿಕೊಡಿ ಅಂತ ನನ್ನ ಕೇಳಿದರು. ತಕ್ಷಣ ನಿನ್ನ ನೆನಪು ಬಂತು. ಹೇಗಿದ್ದರೂ ನೂರಾರು ಯಂತ್ರಗಳನ್ನು ನಿರ್ಮಿಸಿರುವ ಅನುಭವ ನಿನಗಿದೆ. ಅದಕ್ಕೇ ಬೆಳಗ್ಗೆ ಫೋನ್ ಮಾಡಿದೆ'' ಅಂದ ಶ್ರೀನಿ.

ಭಕ್ತರು ಕಷ್ಟದಲ್ಲಿದ್ದಾಗ ಭಗವಂತ ಅವರ ನೆರವಿಗೆ ಬರುವುದು ಎಲ್ಲರಿಗೂ ತಿಳಿದದ್ದೇ. ಭಗವಂತ ಕಷ್ಟದಲ್ಲಿದ್ದಾಗ ಭಕ್ತರು ಅವನ ನೆರವಿಗೆ ಹೋಗದಿದ್ದರೆ, ಖಂಡಿತ ಅದು ಧರ್ಮಸಮ್ಮತವಲ್ಲ ಎಂದು ನಿರ್ಧರಿಸಿ ನಾನು ಲಗುಬಗೆಯಿಂದ (ಹಾಗಂದ್ರೇನ್ರೀ?) ಶ್ರೀನಿಯೊಂದಿಗೆ ದೇವಸ್ಥಾನಕ್ಕೆ ಹೊರಟೆ. ಮೊದಲು ಮಂಗಳಾರತಿ ಮಾಡಿಸಿ, ದೇವಸ್ಥಾನದ ಪಕ್ಕದಲ್ಲಿದ್ದ ಬೃಹತ್ ಗರಾಜನ್ನು ಸೇರಿದೆವು. ಶ್ರೀನಿ ಹೇಳಿದ್ದು ಉತ್ಪ್ರೇಕ್ಷೆಯೇನೂ ಆಗಿರಲಿಲ್ಲ.

ಬಹಳ ಮಜಬೂತಾಗಿದ್ದ ತೇರು ಅದು. ಸುಮಾರು ಎರಡಂತಸ್ತಿನ ಮನೆಯಷ್ಟು ಎತ್ತರ. ಕನಿಷ್ಟಪಕ್ಷ ಮೂರು ಟನ್‌ಗಳಷ್ಟಾದರೂ ತೂಕವಿದ್ದ ಆ ತೇರಿಗೆ ಬಹಳ ಕುಶಲತೆಯಿಂದ ಬೆಳ್ಳಿಯ ಕವಚವನ್ನು ಹೊದಿಸಲಾಗಿತ್ತು. ಗೋಪುರದ ಮೇಲೆ ವಿವಿಧ ದೇವತೆಗಳ ವಿಗ್ರಹಗಳು, ಮಧ್ಯಭಾಗದಲ್ಲಿ ನಾಲ್ಕು ಕಂಭಗಳಿಗೂ ನಾಜೂಕಾಗಿ ಕುಸುರಿ ಕೆಲಸ ಮಾಡಿದ ಹೊದಿಕೆ. ಕೆಳಗಿನ ಪೀಠಭಾಗದ ಅಂಚಿಗೆ ಬೆಳ್ಳಿಯ ತಗಡು. ಇವೆಲ್ಲವನ್ನೂ ಹೊತ್ತಿರುವ ಬೃಹತ್ ಗಾಲಿಗಳು. ತೇರನ್ನು ಬೇಕಾದ ದಿಕ್ಕಿಗೆ ತಿರುಗಿಸಲು ಅನುವಾಗುವಂತೆ ಮುಂಭಾಗದಲ್ಲಿ ಎರಡು ಚಕ್ರಗಳು. ಒಟ್ಟಿನಲ್ಲಿ ಒಂದು ಭವ್ಯವಾದ ತೇರಿಗೆ ಇರಬೇಕಾದ ಲಕ್ಷಣಗಳೆಲ್ಲಾ ಆ ಭಗತವದ್ವಾಹನಕ್ಕೆ ಇತ್ತು ಎನ್ನಬಹುದಾಗಿತ್ತು. ಆದರೆ ಧರ್ಮದರ್ಶಿಗಳು ಮೊದಲೇ ಹೇಳಿದ್ದಂತೆ ಈ ತೇರಿಗೆ ಬ್ರೇಕಿರಲಿಲ್ಲ.

ನಾನು ಒಮ್ಮೆ ತೇರನ್ನು ಪ್ರದಕ್ಷಿಣೆ ಹಾಕಿದೆ. ಹೊಸದಾಗಿ ಬಿಡಿ ಭಾಗಗಳನ್ನು ತಯಾರಿಸುವ ಗೋಜಿಗೆ ಹೋಗದೇ ಯಾವುದಾದರೂ ರೆಡಿಮೇಡ್ ಬ್ರೇಕನ್ನು ತೇರಿಗೆ ಅಳವಡಿಸುವುದು ಸಾಧ್ಯವೇ ಎಂಬ ಆಲೋಚನೆ ಮನಸದಲ್ಲಿ ಸುಳಿದಾಡಿತು. ಟ್ರಾಕ್ಟರ್ ಬ್ರೇಕನ್ನು ಇದಕ್ಕೆ ಹೊಂದಿಸಿದರೆ? ಬ್ರೇಕನ್ನು ಹೊಂದಿಸಲು ಎರಡು ಗಾಲಿಗಳ ಮಧ್ಯೆ ಸೂಕ್ತವಾದ ಜಾಗವೂ ಇತ್ತು.

ಶ್ರೀನಿ ಮತ್ತು ಧರ್ಮದರ್ಶಿಗಳು ಡಾಕ್ಟರನ್ನು ನೋಡುವ ಪೇಷಂಟುಗಳಂತೆ ನಸ್ವತ್ತ ಕಾತರದಿಂದ ನೋಡುತ್ತಿದ್ದರು. ಇಷ್ಟು ಹೊತ್ತಿಗೆ ಒಬ್ಬ ಅಸಿಸ್ಟೆಂಟ್ ಧರ್ಮದರ್ಶಿಯೂ ಬಂದು ನಮ್ಮ ಗುಂಪನ್ನು ಸೇರಿದ್ದರು. ನಾನು ನನ್ನ ಸಲಹೆಯನ್ನು ಮಂಡಿಸಿದೆ. ''ಹೊಸದಾಗಿ ಬ್ರೇಕನ್ನು ಡಿಸೈನ್ ಮಾಡಿ ತಯಾರಿಸುವ ಕೆಲಸ ದುಬಾರಿಯಾಗಬಹುದು. ಟ್ರಾಕ್ಟರುಗಳಿಗೆ ಬಳಸುವ ಬ್ರೇಕ್ ಇದಕ್ಕೆ ಸರಿ ಹೊಂದಬಹುದು. ಖರ್ಚೂ ಕಡಿಮೆ. ಕೆಲಸವೂ ಬೇಗ ಮುಗಿಯುತ್ತೆ. ನೀವು ಒಪ್ಪಿದರೆ, ಸೂಕ್ತವಾದ ಐಟಮ್ಮನ್ನು ಹುಡುಕಲು ತೊಡಗುವೆ'' ಅಂದೆ.

ಧರ್ಮದರ್ಶಿ ಮತ್ತು ಅವರ ಅಸಿಸ್ಟೆಂಟ್ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಇಬ್ಬರೂ ಯಾವುದೋ ಒಂದು ಅಗೋಚರವಾದ ತೊಳಲಾಟದಲ್ಲಿದ್ದಂತಿತ್ತು. ಕೊನೆಗೆ, ಧರ್ಮದರ್ಶಿಗಳು ತಮ್ಮ ಅನುಮಾನವನ್ನು ಪ್ರಸ್ತಾಪಿಸಲು ಮುಂದಾದರು.

''ಟ್ರಾಕ್ಟರಿನ ಬ್ರೇಕು ಯಾವ ಲೋಹದ್ದು?''

ಯಾವ ಲೋಹದ್ದು? ಇದೊಂದು ವಿಚಿತ್ರ ಪ್ರಶ್ನೆ ಅನ್ನಿಸಿತು ನನಗೆ. ನಿಮ್ಮ ಟಿ.ವಿ. ಸೆಟ್ಟು ಯಾವ ಲೋಹದ್ದು ಎಂದಷ್ಟೇ ಅಸಂಬದ್ಧ ಈ ಪ್ರಶ್ನೆ. ಬ್ರೇಕ್ ಅಂದರೆ ಅದೊಂದು ವಿವಿಧ ಬಿಡಿ ಭಾಗಗಳ ಸಮ್ಮಿಳನ. ಬ್ರೇಕ್ ಡ್ರಮ್ ಎರಕದ ಕಬ್ಬಿಣದಿಂದ ಮಾಡಿದ್ದರೆ, ಶೂಗಳನ್ನು ಉಕ್ಕಿನಿಂದ ಮಾಡಿ ಅದಕ್ಕೆ ಫೆರ್ರೊಡೋ ಲೈನಿಂಗ್ ಅಳವಡಿಸಿರುತ್ತಾರೆ. ಶೂ ಅಕ್ಷದ ... ಸರಿ ಇದನ್ನೆಲ್ಲಾ ವಿವರಿಸುವ ಬದಲು ಒಂದು ಸರಳವಾದ ಉತ್ತರ ಹೇಳಿದರೆ ಸಾಕು ಅನ್ನಿಸಿತು.

''ಕಬ್ಬಿಣ'' ಅಂದೆ.

''ಕಬ್ಬಿಣ ನಿಷಿದ್ಧ'' ಅಸಿಸ್ಟೆಂಟರ ಪ್ರತಿಕ್ರಿಯೆ ತಕ್ಷಣ ಬಂತು.

ಧರ್ಮದರ್ಶಿಗಳಿಗೆ ಈ ಪ್ರತಿಕ್ರಿಯೆ ತೀರ ಮೊಟಕಾಯಿತು ಎಂದು ಅನ್ನಿಸಿರಬೇಕು. ವಿವರಿಸಿ ಹೇಳುವ ಉದ್ದೇಶದಿಂದ ಅವರು, ''ನೋಡಿ ಸ್ವಾಮಿ, ವಾಸ್ತು ಶಾಸ್ತ್ರದ ರೀತ್ಯಾ, ತೇರಿನ ರಚನೆಯಲ್ಲಿ, ತೇಗ, ಮತ್ತಿ ಮತ್ತು ಶ್ರೀಗಂಧ ಈ ಮೂರು ಮರಗಳು, ಬೆಳ್ಳಿ, ಬಂಗಾರ, ಮಿಶ್ರಧಾತು ಈ ಮೂರು ಲೋಹಗಳು, ನವಣೆ, ಸಜ್ಜೆ, ರಾಗಿ ಈ ಮೂರು ಧಾನ್ಯಗಳು, ಜೇನುತುಪ್ಪ, ಹಾಲಿನ ಕೆನೆ, ಮೊಸರು ಈ ಮೂರು ದ್ರವ್ಯಗಳು ಇವಿಷ್ಟನ್ನು ಮಾತ್ರ ಬಳಸಬೇಕು ಎಂದು ಉಲ್ಲೇಖಿಸಲ್ಪಟ್ಟಿದೆ. ಆ ಮಿತಿಯಲ್ಲೇ ನೀವು ಬ್ರೇಕನ್ನು ತಯಾರಿಸುವುದಕ್ಕಾಗುವುದಿಲ್ಲವೇ'' ಎಂದು ಬಹು ಸೌಜನ್ಯದಿಂದ ಕೇಳಿದರು.

ನಿಜಕ್ಕೂ ನನಗೆ ಇದೊಂದು ದೊಡ್ಡ ಸವಾಲಾಯಿತು.

"ಸ್ವಲ್ಪ ಕಾಲಾವಕಾಶ ಕೊಡಿ. ವ್ಯಾಸಂಗ ಮಾಡಿ, ತಿಳಿಸುತ್ತೇನೆ" ಎಂದು ಹೇಳಿ ಮನೆಗೆ ಬಂದೆ.

ಹಿಂದೆ ನಾನು ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾಗ, ನಮ್ಮ ಬಾಸ್ ಸದಾಕಾಲ ಹೇಳುತ್ತಿದ್ದ ಬುದ್ಧಿವಾದಗಳಲ್ಲಿ ಒಂದು ಹೀಗಿತ್ತು.

"ವಿಷಯ ಗೊತ್ತಿರಬೇಕು. ಒಂದು ವೇಳೆ ಗೊತ್ತಿಲ್ಲದಿದ್ದರೆ, ಎಲ್ಲಿ ತಿಳಿಯಬಹುದು ಎಂಬುದಾದರೂ ಗೊತ್ತಿರಬೇಕು"

ನನಗೆ ತೇರಿನ ರಚನೆಯ ವಾಸ್ತುಶಾಸ್ತ್ರ ಖಂಡಿತ ತಿಳಿದಿರಲಿಲ್ಲ. ಎಲ್ಲಿ ಈ ಮಾಹಿತಿ ಸಿಗಬಹುದು ಎಂದು ತೀವ್ರವಾಗಿ ಯೋಚಿಸಿದೆ. ಒಡನೆಯೇ ಉತ್ತರ ಹೊಳೆಯಿತು. ನನ್ನ ಮಿತ್ರ ಸುಗು.

ಸುಗು (ಪೂರ್ಣ ನಾಮಧೇಯ ಸುಗವನಂ) ಕೊಯಮತ್ತೂರಿನ ಐಯ್ಯರ್. ಮೇಧಾವಿ ಇಂಜನಿಯರ್. ಅದಕ್ಕೂ ಮಿಗಿಲಾಗಿ ಮಧ್ಯಯುಗದ ವಾಸ್ತುವಿನ ಅಧ್ಯಯನ ಅವರ ಫೇವರೆಟ್ ಹಾಬಿ. ನೇರವಾಗಿ ಅವನ ಬಳಿ ಹೋಗಿ ನನ್ನ ಸಮಸ್ಯೆಯನ್ನು ಅವನ ಮುಂದಿಟ್ಟೆ.

ಒಂದೆರಡು ನಿಮಿಷ ಸುಗು ಮೌನವಾಗಿ ನನ್ನನ್ನು ನೋಡಿದ. ಅನಂತರ ತನ್ನ ಅಗಾಧ ಗ್ರಂಥ ಭಂಡಾರಕ್ಕೆ ಹೋಗಿ ಎರಡು ದಪ್ಪ ಪುಸ್ತಕಗಳನ್ನು ಹೆಕ್ಕಿ ತಂದ. ಮೊದಲನೆಯದು ಆಕ್ಸ್‌ಫರ್ಡ್ ಡಿಕ್ಷನರಿ.

"Juggernaut' ಎಂಬ ಪದದ ಅರ್ಥವನ್ನು ಓದಿ ಹೇಳು ಅಂತ ನನ್ನನ್ನೇ ಕೇಳಿದ.

ನಾನು ಆ ಹೆಣಭಾರದ ಪುಸ್ತಕವನ್ನು ತೊಡೆಯ ಮೇಲೆ ಬ್ಯಾಲೆನ್ಸ್ ಮಾಡುತ್ತಲೇ, ಜಗ್ಗರ್‌ನಾಟ್ ಪದವನ್ನು ಹುಡುಕಿದೆ.


An overwhelming, advancing force that crushes or seems to crush everything in its path: (ದಾರಿಯಲ್ಲಿರುವ ಎಲ್ಲವನ್ನೂ ನಾಶಮಾಡುತ್ತಾ ಮುಂದೆ ಸಾಗುತ್ತಿರುವ ದೈತ್ಯಶಕ್ತಿ) ಎಂದಿತ್ತು.

ಮುಂದಿನ ಸಾಲಿನಲ್ಲಿ ಆ ಪದದ ವ್ಯುತ್ಪತ್ತಿಯ ಬಗ್ಗೆ ಹೇಳುತ್ತಾ.

The origin of the word juggernaut has its root in Jagannath. It appears worshipers have been crushed under the wheels of a huge car or wagon on which the idol of Krishna was drawn in an annual procession at Puri in east-central India. ಎಂದು ಬರೆದಿದ್ದರು.

"ಈಗ ಅರ್ಥ ಆಯ್ತೋ. ಪೂರಿಯ ಜಗನ್ನಾಥನ ರಥ ಚಲಿಸಲು ಪ್ರಾರಂಭಿಸಿದರೆ, ಏನಾಗುತ್ತೆ ಅಂತ. ರಥಕ್ಕೆ ಬ್ರೇಕ್ ಅಳವಡಿಸೋದು ಎಂದಿಗೂ ನಮ್ಮ ಸ್ಟ್ರಾಂಗ್

ಪಾಯಿಂಟ್ ಆಗಿರಲಿಲ್ಲ. ಹಾಗೆಂದ ಮಾತ್ರಕ್ಕೆ, ರಥಾನ ನಿಲ್ಲಿಸ್ತಾನೇ ಇರಲಿಲ್ಲ ಅಂತ ತಿಳ್ಕೋಬೇಡ.'' ಎನ್ನುತ್ತಾ ಸುಗು ಇನ್ನೊಂದು ಗ್ರಂಥಾನ ತೆರೆದ. ಅದೊಂದು ವಾಸ್ತುಶಾಸ್ತ್ರದ ಪುಸ್ತಕ. ತಮಿಳಿನಲ್ಲಿ ಬರೆದದ್ದು. ದೇವಸ್ಥಾನಗಳ ರಥಗಳ ರಚನೆ ಪುಟ ತೆಗೆದು ಅವನೇ ಅದನ್ನು ವಿವರಿಸಲು ಪ್ರಾರಂಭಿಸಿದ.



''ಇಲ್ಲಿ ಬರೆದಿದೆ ನೋಡು ಶಿವ, ರಥಗಳನ್ನು ನಿಲ್ಲಿಸಬೇಕಾದರೆ, ನಾಲ್ವರು 'ನಿರ್ಬಂಧಕರು' ಇರಬೇಕಂತೆ, ಒಂದೊಂದು ಚಕ್ರದ ಮುಂದೆ ಇಬ್ಬಿಬ್ಬರು ತಮ್ಮ ಕೈಗಳಲ್ಲಿ ಒಂದು ಮರದಿಂದ ಮಾಡಿದ ದೊಡ್ಡ ಬೆಣೆಯನ್ನು ಚಕ್ರದ ಮುಂದೆ ಇರಿಸಿ, ಬಹು ಚಾಕಚಕ್ಯತೆಯಿಂದ ರಥದ ಹಾದಿಯಿಂದ ಪಕ್ಕಕ್ಕೆ ಜಿಗಿಯಬೇಕಂತೆ. ರಥ ನಿಧಾನವಾಗಿ ಸಾಗುತ್ತಿದ್ದರೆ, ಬೆಣೆ ಚಕ್ರಕ್ಕೆ ಸಿಕ್ಕಿಕೊಂಡು ರಥ ಗಕ್ಕನೆ ನಿಲ್ಲುತ್ತಿತ್ತು. ರಥವೇನಾದರೂ ಜೋರಾಗಿ ಸಾಗುತ್ತಿದ್ದರೆ, ಆಟೋಗಳು ರಸ್ತೆ ಉಬ್ಬರಗಳ ಮೇಲೆ ನೆಗೆದು ಮುಂದೆ ಹೋಗುಲ್ಲವೇ, ಹಾಗೆ ರಥ ಬೆಣೆಯನ್ನು ನೆಗೆದು ಮುಂದೆ ಸಾಗುತ್ತಿತ್ತು. ಮತ್ತೆ ಬೆಣೆ ಪ್ರಯೋಗ ಮಾಡಿ ರಥವನ್ನು ನಿಲ್ಲಿಸಬೇಕಾಗಿತ್ತು. ಜಿಗಿಯುವುದರಲ್ಲಿ ಸ್ವಲ್ಪ ಎಡವಟ್ಟಾದರೆ, ನಿರ್ಬಂಧಕರಿಗೆ ಮುಕ್ತಿ ಪ್ರಾಪ್ತಿ ಖಂಡಿತ ಅಂತ ಇಲ್ಲಿ ಬರೆದಿದೆ.''

ನನ್ನ ಸಮಸ್ಯೆಗೆ ಪರಿಹಾರ ದೊರಕುವ ಸೂಚನೆಗಳೇ ಕಾಣಲಿಲ್ಲ.

''ಈಗ ನಾನೇನು ಮಾಡಬೇಕು ಅಂತೀ ಸುಗು?'' ಅಂತ ಅವನನ್ನೇ ಕೇಳಿದೆ.

''ಒಂದೇ ಮಾರ್ಗ ಅಂದರೆ ಮರದಿಂದ ಮಾಡಿದ ಬ್ರೇಕ್ ಡಿಸ್ಕೊಂದಕ್ಕೆ ತೊಗಲಿನ ಪಟ್ಟಿ ಬಿಗಿದು ಮಧ್ಯಯುಗದ ಬ್ರೇಕ್ ಒಂದನ್ನು ಅಳವಡಿಸುಕ್ಕಾಗುತ್ತಾ ನೋಡು'' ಎಂದು ಹೇಳಿ ಸುಗು ಕೈತೊಳೆದುಕೊಂಡ.

ಮನೆಗೆ ಹಿಂತಿರುಗುವ ದಾರಿಯಲ್ಲಿ, ರಥದ ಬ್ರೇಕಿಗೆ ದನದ ತೊಗಲನ್ನು ಬಳಸುವ ವಿಷಯವನ್ನು ಪ್ರಸ್ತಾಪಿಸಿ ಯಾರಾದರೊಬ್ಬರ ಹೃದಯಾಘಾತಕ್ಕೆ ಕಾರಣವಾಗುವ ಬದಲು ಸುಮ್ಮನೆ ಇರುವುದು ಮೇಲು ಅನ್ನಿಸಿತು. ಮನೆ ಸೇರಿದ ಮೇಲೆ ನನ್ನ ಪತ್ನಿ,

''ದೇವರ ಕಾರ್ಯ ಏನಾಯಿತು? ಸುಗು ಏನಾದರೂ ಪರಿಹಾರ ಹೇಳಿದರೇ?'' ಎಂದೆಲ್ಲಾ ಪ್ರಶ್ನೆಗಳ ಮಳೆ ಸುರಿಸಿದಳು.


''ಚರ್ಮ, ಕಬ್ಬಿಣ, ಇವನ್ನು ಬಳಸದೇ ಬ್ರೇಕ್ ತಯಾರಿಸೋದು ನನಗಂತೂ ಸಾಧ್ಯವಿಲ್ಲ ಕಣೆ. ಹಿಂದಿನ ಕಾಲದಲ್ಲಿ ಇದ್ದಂತೆ ನಾಲ್ವರು ನಿರ್ಬಂಧಕರನ್ನ ನೇಮಿಸಿಕೊಳ್ಳಿ ಅಂದು ಬಿಡೋಣ ಅಂತಿದೀನಿ'' ಅಂದೆ.

ಅವಳಿಗೆ ಕೋಪ ನೆತ್ತಿಗೇರಿತು.

''ಚೆನ್ನಾಯಿತು. ಬೆಳಗ್ಗೆ ತಾನೇ ದೇವರಿಗೆ ಹರಸಿಕೊಂಡಿದೀನಿ. ನನ್ನ ಪತಿ ನಿನ್ನ ಕಾರ್ಯ ನಡೆಸೇ ನಡಸ್ತಾರೆ. ನನ್ನ ಹರಕೆ ಫಲಿಸೋ ಹಾಗೆ ಮಾಡಪ್ಪಾ ಅಂತ. ಕೊನೆಗೆ ಏನೂ ಆಗದಿದ್ರೆ, ನಿರ್ಬಂಧಕರನ್ನಾದರೂ ಗೊತ್ತು ಮಾಡಿಕೊಡಿ ಹೋಗಿ'' ಅಂದುಬಿಟ್ಟಳು.

ನಾನು ಮಾಡದ ಕೆಲಸವನ್ನು ಬೇರೆಯೋರಿಗೆ ಹೇಳುಕ್ಕಾಗುತ್ಯೇ. ಹಾಗಾಗಿ ಈಗ ನಾನೇ ಈ ಕೆಲಸ ಮಾಡುಕ್ಕೆ ಸಿದ್ಧನಾಗಿದೀನಿ. ಇನ್ನು ಮೂವರು ವಾಲಂಟೀರುಗಳು ಸಿಕ್ಕಿದ ತಕ್ಷಣ ಧರ್ಮದರ್ಶಿಯವರನ್ನು ಭೇಟಿ ಮಾಡಲು ಓಡುತ್ತೇನೆ. ನಿಮಗೆ ಯಾರಾದರೂ ಈ ಕೆಲಸ ಮಾಡೋರು ತಿಳಿದಿದ್ರೆ, ಬೇಗ ತಿಳಿಸಿ ಪ್ಲೀಸ್.

★★★



ಅಮೆರಿಕೆಯ ಶಾಂತಿ ಯತ್ನ

Statement about ownership and other particulars about the News Paper APARANJI to be published every year in the first issue appearing after the last day of February.

Form IV

(See Rule 8)

1.	Place of Publication	:	Bangalore
2.	Periodicity	:	Monthly
3.	Printer's Name	:	V.R. Nath
	Nationality	:	Indian
	Address	:	44, Sampige Road, Malleswaram Bangalore - 560 003
4.	Publisher's Name	:	Sri M. Shivakumar
	Nationality	:	Indian
	Address		36, 6th Main Road Malleswaram, Bangalore - 560 003
5.	Editor's Name	:	Sri M. Shivakumar
	Nationality	:	Indian
	Address	:	36, 6th Main Road Malleswaram, Bangalore - 560 003
6.	Name and Address of Individuals who own the News Paper and Partners/Shareholders Holding more than one percent of the total capital.	:	Koravanji Aparanji Trust 36, 6th Main Road Malleswaram, Bangalore - 560 003

I, M. Shivakumar hereby declare that the particulars given above are true to the best of my knowledge and belief.

Sd/-

M. Shivakumar

1st March 2004 Publisher

Reg. No.: CPMG/KA/BGW-544/2003-05

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR